300 ರಿಂದ 500 ರೂಪಾಯಿಯನ್ನು ಕಳೆದುಕೊಂಡು ವ್ಯಾಪಾರ ಮಾಡಲೂ ಯಾರು ಹೋಗುವುದಿಲ್ಲ, ಮುಖ್ಯ ಮಂತ್ರಿಗಳು ಇದ್ದಾರೆ. ಇವತ್ತು ಕಡೆ ದಿವಸ ; ಇದರ ಬಗ್ಗೆ ಮುಖ್ಯಮಂತ್ರಿಗಳು ಸರ್ಕಾರದ ನಿರ್ಧಾರ ಪ್ರಕಟಿಸಿ ರೈತರನ್ನು ಸಂತೋಷಪಡಿಸಿದರೇ ದೇವರು ನಿಮಗೆ ಒಳ್ಳೆಯದು ಮಾಡುತ್ತಾನೆ. ಎಪ್ಪತ್ತೈದು ಅಥವಾ ಒಂದು ರೂಪಾಯಿಯನ್ನು ಜಾಸ್ತಿ ಮಾಡಿ, ಇದೇನು ದೊಡ್ಡ ಮೊತ್ತ ಅಲ್ಲ. After all, it is nothing.

ಶ್ರೀ ಬಿ.ಪಿಚ್. ಬನ್ನಿಕೋಡ್ : ಉದ್ದಿಮೆಗಳಲ್ಲಿ ತಯಾರು ಮಾಡತಕ್ಕ ಎಲ್ಲ ವಸ್ತುಗಳಿಗೆ ಎಲ್ಲ ರೀತಿಯ ಖರ್ಚು ವೆಚ್ಚ ಲೆಕ್ಕ ಹಾಕಿ, ಶೇಕಡ 25 ರಷ್ಟು ಲಾಭವನ್ನು ಸೇರಿಸುತ್ತಾರೆ. ಅದೇ ರೀತಿ ಖರ್ಚು ವೆಚ್ಚವನ್ನೆಲ್ಲ ಲೆಕ್ಕಹಾಕಿ, ಸರಿಯಾದ ಬೆಲೆಯನ್ನು ರೈತರಿಗೆ ಕೊಡಬೇಕು. ಈ ಸರ್ಕಾರ ರೈತನಿಗೆ ಶೋಷಣೆ ಮಾಡುತ್ತಿದೆ. ಉಳಿದ ಉತ್ಪಾದನೆಗಳಿಗೆ ಈ ಸರ್ಕಾರ ಯಾವ ರೀತಿ ಗಮನಹರಿಸಿದೆ, ಅದೇ ರೀತಿ ಹಾಲಿನ ಬಗ್ಗೆಯೂ ಕೂಡ ಗಮನಹರಿಸಬೇಕು. ಹಾಲನ್ನು ಕೊಡುವ ರೈತರಿಗೆ ಲಾಭ ಕೊಡುವ ಹಾಗೆ ಮಾಡಬೇಕು. ಈಗ ಇನ್ನು ಇಡೀ ರಾಜ್ಯದಲ್ಲಿ ದನಗಳು ಮೇಯಲು ಹುಲ್ಲುಗಾವಲುಗಳು ಇಲ್ಲ.

MR. SPEAKER : Repetition does not strengthen the case. ಅವರು ಇದನ್ನೆಲ್ಲಾ ಹೇಳಿದ್ದಾರೆ.

ಶ್ರೀ ಬಿ.ಪಿಚ್. ಬನ್ನಿಕೋಡ್ : ಎಲ್ಲಿ 10-20 ಎಕರೆ ಹುಲ್ಲುಗಾವಲು ಇದೆ, ಅದನ್ನು ಕೊಟ್ಟರೆ ಐಆರ್‌ಡಿಪಿ ಹಣದಲ್ಲಿ ಕೊಡುವಂತಹ ದನಕರುಗಳನ್ನು ಮೇಯಿಸಲು ಅನುಕೂಲವಾಗುತ್ತದೆ. ಅಲ್ಲಿ ಹೆಚ್ಚು ಜಮೀನು ಇದೆ. ಅದನ್ನು ಸಾಗುವಳಿಗೆ ಕೊಡಿ; ಆದರೆ ಕಡಿಮೆ ಇರುವುದನ್ನು ಸಾಗುವಳಿಗೆ ಕೊಡಬಾರದು. ದನಗಳು ಮೇಯಲು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎಂ. ಇದಿನಬ್ಬ : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 3 ರೂಪಾಯಿಗೆ ತೆಗೆದುಕೊಂಡು 6-7 ರೂಪಾಯಿಗೆ ವ್ಯಾಪಾರ ಮಾಡುತ್ತಿದ್ದಾರೆ. ಅಲ್ಲಿ ರೈತರು ಕಂಗಾಲಾಗಿದ್ದಾರೆ. ಗ್ರಾಹಕರು 6-7 ರೂಪಾಯಿಯನ್ನು ಕೊಟ್ಟು ತೆಗೆದುಕೊಳ್ಳಬೇಕಾಗಿದೆ. ದಕ್ಷಿಣ ಕನ್ನಡದಲ್ಲಿ ಹಾಲಿನ ಬವಣೆ ಬಹಳ ಇದೆ. ಇದನ್ನು ನೀಗಿಸಲು ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ ಬೆಲೆ ಏರಿಕೆಯ ಬಗ್ಗೆ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಈ ಬಗ್ಗೆ ಪರಿಶೀಲನೆ ಮಾಡುತ್ತೇನೆಂದು ನಾನು ಹೇಳಿಲ್ಲ ಬೂಸ್ ಹಿಂಡಿ ಬೆಲೆ ಹೆಚ್ಚಿದ ರೀತಿ ರೈತರಿಗೂ ಕೂಡ ಹೆಚ್ಚಿನ ಬೆಲೆಯನ್ನು ಕೊಟ್ಟಿಲ್ಲವೆಂದು ಹೇಳಿದ್ದಾರೆ. ಈ ವಿಚಾರದಲ್ಲಿ ಮಾನ್ಯ ರಂಗನಾಥ್‌ರವರು ಹೇಳಿದ ಪ್ರಕಾರ ರೈತರಿಗೂ ಕೊಡತಕ್ಕ ಬೆಲೆಗೂ ಹಾಲಿನ ಮಾರಾಟದ ಬೆಲೆಗೂ ಇರತಕ್ಕ ವ್ಯತ್ಯಾಸವನ್ನು ಪರಿಶೀಲನೆ ಮಾಡಿ ನಾವು ಸದ್ಯದಲ್ಲೇ ಕ್ರಮ ತೆಗೆದುಕೊಳ್ಳುತ್ತೇವೆ. ನಾವು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ, ಇದರ ಬಗ್ಗೆ ಸರ್ಕಾರ ತೀವ್ರವಾಗಿ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತೇವೆ. ಗ್ರಾಹಕರು ಮತ್ತು ಉತ್ಪಾದಕರು ಇವರುಗಳನ್ನು ಸಮನ್ವಯಗೊಳಿಸಿ ಈ ನಿರ್ಣಯವನ್ನು ಮಾಡಬೇಕು. ಎಂದು ಹೇಳಿ ತೀವ್ರವಾಗಿ ಆಲೋಚನೆ ಮಾಡಿ ಇನ್ನು ಒಂದೆರಡೂ ವಾರದಲ್ಲಿ ಕ್ರಮ ಕೈಗೊಳ್ಳುತ್ತೇವೆ. ಹಾಗೂ ಸೂಕ್ತ ಘೋಷಣೆಯನ್ನು ಮಾಡುತ್ತೇವೆ.

ರೈತರ ಸಾಲ ಮನ್ನಾ ಮಾಡುವುದು ಹಾಗೂ ಗೊಬ್ಬರದ ಬೆಲೆ ಏರಿಕೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ದೆಹಲಿಗೆ ನಿಯೋಗ ಹೋಗಿ ಬಂದ ನಂತರ ಮುಖ್ಯಮಂತ್ರಿಗಳು ಸಾಲ ಮನ್ನಾ ಬಗ್ಗೆ ಸಮಗ್ರವಾದ ಹೇಳಿಕೆಯನ್ನು ಕೊಡುತ್ತೇವೆಂದು ಭರವಸೆಯನ್ನುಕೊಟ್ಟಿದ್ದರು. ನಮ್ಮ ಸರ್ಕಾರದ ನಿಲುವು ಏನು, ಈ ಬಗ್ಗೆ ಸರ್ಕಾರ ತೀರ್ಮಾನ ಏನು ಎಂಬುದನ್ನು ಅಲ್ಲಿಂದ ಬಂದತಕ್ಷಣ ಅವರು ಹೇಳುವುದಾಗಿ ಭರವಸೆಯನ್ನು ಕೊಟ್ಟಿದ್ದರು. ತಾವು ಕೂಡ ಒಂದು ಹೇಳಿಕೆ ಕೊಡಿಸುವುದಾಗಿ ಹೇಳಿದ್ದಿರಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅವತ್ತು ಚರ್ಚೆಯಾಗತಕ್ಕಂಥ ಸಂದರ್ಭದಲ್ಲಿ ತಾವು ಇರಲಿಲ್ಲ. ತಮ್ಮ ಸರ್ಕಾರದ ನಿಲುವು ಏನಿದೆ ಎಂಬುದನ್ನು ಈ ಸದನದಲ್ಲಿ ಸ್ಪಷ್ಟಪಡಿಬೇಕು. ಏಕೆಂದರೆ 10 ಸಾವಿರ ರೂಪಾಯಿ ಒಳಗಡೆ ಇರತಕ್ಕ ರೈತರ ಸಾಲವನ್ನು ವಸೂಲು ಮಾಡುತ್ತಿಲ್ಲ ಎಂದು ಹೇಳಿದರು. ಆದರೆ ರೈತರ ಆಸ್ತಿ ಜಪ್ತಿ ನಡೆಯುತ್ತಿದೆ. ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ನೋಟೀಸ್ ಕೊಟ್ಟಿದ್ದಾರೆ. ಇದರ ಬಗ್ಗೆ ಸಾವಿರಾರು ಪತ್ರಗಳು ಅರ್ಜಿಗಳು ನಮಗೆ ಬಂದಿದೆ. ಅವುಗಳನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಕಳುಹಿಸಿಕೊಟ್ಟಿದ್ದೇನೆ. ಈ ಬಗ್ಗೆ ಒಂದು ನಿಯೋಗ ದೆಹಲಿಗೆ ಹೋಗಿ ನಾವೆಲ್ಲ ಸೇರಿ ಅವರ ಗಮನ ಸೆಳೆಯುವ ಪ್ರಯತ್ನ ಮಾಡಿದ್ದೇವೆ. ಈ ಬಗ್ಗೆ ಸರ್ಕಾರದ ನಿಲುವು ಏನು? 10 ಸಾವಿರ ರೂಪಾಯಿ ಸಾಲ ಮನ್ನಾಮಾಡಲು ಸರ್ಕಾರ ಸಹಾಯ ಮಾಡುತ್ತದೋ ಇಲ್ಲವೋ?

10.05 ಎ.ಎಂ

ಇದರ ಬಗ್ಗೆ ಸರ್ಕಾರದ ನಿಲುವನ್ನು ಸ್ಪಷ್ಟ ಮಾಡದಿದ್ದರೆ ಹಾಗೂ ಪರ್ಯಾಯವಾದ ಪರಿಹಾರವನ್ನು ಕಂಡುಹಿಡಿಯದಿದ್ದರೆ, ರೈತರು ಸಾಲ ಮನ್ನಾ ಆಗಿದೆ ಎಂದು ಕೈಕಟ್ಟಿ ಕುಳಿತುಕೊಂಡಿದ್ದಾರೆ. ರೈತ ತುಂಬಾ ಕಷ್ಟದಲ್ಲಿದ್ದಾನೆ. ಅಧಿಕಾರಿಗಳು ಅವರಿಗೆ ಕಿರುಕುಳ ಕೊಡುತ್ತಿದ್ದಾರೆ. ಕ್ರಾಪ್ ಲೋನ್ ಸಿಗುತ್ತಿಲ್ಲ, ತಾವು ಇಲ್ಲಿ ಸದನದಲ್ಲಿ ಹೇಳಿಕೆ ಕೊಟ್ಟು ಮೇಲೂ ಸಹ ನೋಟೀಸ್ ಕೊಟ್ಟಿರುವುದು, ಜಪ್ತಿ ಆಗಿರುವುದು, ಜಮೀನು ಹರಾಜು ಆಗಿರುವುದು, ಇದರ ಬಗ್ಗೆ ನೋಟಿಫಿಕೇಷನ್ ಹೊರಡಿಸಿರುವುದಕ್ಕೆ ನನ್ನಲ್ಲಿ ನೂರಾರು ಉದಾರಣೆಗಳು ಇವೆ, ಆದ್ದರಿಂದ ಇದರ ಬಗ್ಗೆ ಸರ್ಕಾರ ನಿಲುವೇನು ಎಂಬುದನ್ನು ಸ್ಪಷ್ಟ ಮಾಡಿ.

ಶ್ರೀ ವಾಟಾಳ್ ನಾಗರಾಜ್ : ಸರ್ವಪಕ್ಷಗಳ ನಿಯೋಗ ದೆಹಲಿಗೆ ಹೋಗಿ ಬಂದ ನಂತರ ಈ ಸಮಸ್ಯೆಗೆ ಸಮಾಧಾನವಾಗುವ ರೀತಿಯಲ್ಲಿ ಒಂದು ಹೇಳಿಕೆಯನ್ನು ಈ ಸದನದಲ್ಲಿ ಕೊಡಬೇಕೆಂದು ತಾವು ಹೇಳಿದ್ದಿರಿ.

ಅಧ್ಯಕ್ಷರು : ನಾನು ಅಂದು ಏನು ಹೇಳಿದ್ದೆ ಎನ್ನುವುದನ್ನು ನಾನೇ ಈ ಸದನದ ಹಾಗೂ ಮುಖ್ಯಮಂತ್ರಿಗಳ ಅವಗಾಹನೆಗೆ ತರುತ್ತೇನೆ. ಅವತ್ತು ಧರಣಿ ನಡೆಯುತ್ತಿತ್ತು. ಆಗ ....

ಶ್ರೀ ಪಿ.ಜಿ.ಆರ್. ಸಿಂಧ್ಯ : ಈ ಬಗ್ಗೆ ನಾನು ಹೇಳುವುದೇನೆಂದರೆ, ಮಾನ್ಯ ಮಂತ್ರಿಯವರ ಜೊತೆಯಲ್ಲಿ ನಾವು ದೆಹಲಿಗೆ ಹೋಗಿ ಬಂದ ನಂತರ, ಎರಡು ವಿಚಾರಗಳ ಬಗ್ಗೆ, ರೈತರ ಸಾಲ ಮನ್ನಾ ಮತ್ತು ಗೊಬ್ಬರದ ಬೆಲೆ ವಿಚಾರದಲ್ಲಿ ಸಂಬಂಧಪಟ್ಟ ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ರಾಜ್ಯದ ರೈತರಿಗೆ

ಏನಾದರೂ ಒಂದು ಪರಿಹಾರವನ್ನು ಕೊಡುತ್ತೇವೆ ಎನ್ನುವ ಭರವಸೆಯನ್ನು ತಾವು ನೇರವಾಗಿ ಹೇಳಿಲ್ಲದೇ ಹೋದರೂ ಸಹ ಅಪ್ರತ್ಯಕ್ಷವಾಗಿ ತಾವು ಹೇಳಿದ್ದೀರಿ, ನೀವು ರೈತರಿಗೆ ಇದರ ಬಗ್ಗೆ ಎನಾದರೂ ರಿಯಾಯಿತಿಯನ್ನು ಕೊಡುವಿರೆಂದು ಕಾಯುತ್ತಿದ್ದೇವೆ. ನಮ್ಮ ಬಿಜೆಪಿ ಪಕ್ಷದವರು ಮೊನ್ನೆ ಸಬ್ಬಿಡಿಯನ್ನು ಕೊಡುತ್ತೇವೆಂದು ಹೇಳಿ ಮತ್ತೆ ಸಬ್ಸಿಡಿಯನ್ನು ಕೊಡುವುದಿಲ್ಲವೆಂದು ಹೇಳಿರುವುದು ಪತ್ರಿಕೆಯಲ್ಲಿ ಬಂದಿದೆ. ನಾನು ಇದರ ಬಗ್ಗೆ ಆಕ್ಷೇಪಣೆ ಮಾಡುತ್ತಿಲ್ಲ. ನಾನು ಈ ಬಗ್ಗೆ ರಾಜಕೀಯ ಮಾಡುತ್ತಿಲ್ಲ. ರಾಜಕೀಯ ಮಾಡುವವರೇ ಬೇರೆ. ನಾನು ಹೇಳಿದರೆ ಮಾತ್ರ ಅದು ರಾಜಕೀಯವಾಗುತ್ತದೆ ನೀವು ಹೇಳಿದರೆ ಅದು ರಾಜಕೀಯವಾಗುವುದಿಲ್ಲವೋ? ಇದನ್ನು ನಾನು ಏಕೆ ಹೇಳಬಾರದು? ನನಗೆ ಆ ಹಕ್ಕು ಇದೆ. ನಾನು ರೈತರ ಪರವಾಗಿ ಮಾತನಾಡುತ್ತಿರುವಾಗ ಈ ವಿಚಾರವನ್ನು ಹೇಳುತ್ತಿದ್ದೇನೆ. ಇವತ್ತು ಕೇಂದ್ರ ಸರ್ಕಾರ ರೈತರನ್ನು ಎರಡು ರೀತಿಯಲ್ಲಿ ವಿಂಗಡಣೆ ಮಾಡಿ ಸಣ್ಣ ರೈತರು ಮತ್ತು ದೊಡ್ಡ ರೈತರು ಎಂದು ಹೇಳುತ್ತಾ, ನಮ್ಮ ಮೇಲೆ ಗೊಬ್ಬರದ ಬೆಲೆಯನ್ನು 40 ಪರ್ಸೆಂಟ್ ಜಾಸ್ತಿ ಮಾಡಿ, 10 ಪರ್ಸೆಂಟ್ ಇಳಿಸಿ, ಕೊನೆಗೆ 30 ಪರ್ಸೆಂಟ್ ಗೊಬ್ಬರದ ಬೆಲೆಯನ್ನು ಜಾಸ್ತಿ ಮಾಡಿದ್ದಾರೆ. ಈ 30 ಪರ್ಸೆಂಟ್ ಹೆಚ್ಚಳವನ್ನು ರಾಜ್ಯ ಸರ್ಕಾರದಿಂದ ಭರಿಸಲು ಸಾಧ್ಯವೇ ಎಂಬುದನ್ನು ನಾವು ವಿಚಾರ ಮಾಡಬೇಕಾಗಿದೆ. ಏಕೆಂದರೆ ಇವತ್ತು ಬಿಜೆಪಿ ಒಂದು ಜವಾಬ್ದಾರಿ ಪಕ್ಷದವರು. ಕೇಂದ್ರದಲ್ಲಿ ವಿರೋಧಪಕ್ಷದಲ್ಲಿ ಇದ್ದಾರೆ. ಈ ಹೆಚ್ಚುವರಿ ಬೆಲೆಯನ್ನು ತುಂಬಿಸಿ ಕೊಡುತ್ತೇವೆಂದು ಅವರ ಆಡಳಿತ ಇರುವಂಥ ರಾಜ್ಯಗಳಿಗೆ ಸಂಬಂಧಪಟ್ಟಂತೆ ಹೇಳಿದ್ದಾರೆ. ಇದು ಪತ್ರಿಕೆಗಳಲ್ಲೂ ಸಹ ಬಂದಿದೆ. ಇವತ್ತು ಬಿಜೆಪಿ ಪಕ್ಷದ ಅಧ್ಯಕ್ಷರು ತುಂಬಿಸಿಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿದ್ದಾರೆ. ಸಾಲ ಮನ್ನಾ ವಿಚಾರದಲ್ಲೂ ಸಹ ಅನೇಕ ಮಾತುಗಳನ್ನು ನಮ್ಮ ಸದನದ ಗೌರವಾನ್ವಿತ ಸದಸ್ಯರಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಹೇಳಿದ್ದಾರೆ. ಅವರು ಇದನ್ನು ಮಧ್ಯಪ್ರದೇಶದಲ್ಲಿ ಮಾಡಿದ್ದೇವೆ, ರಾಜಸ್ತಾನದಲ್ಲಿ ಮಾಡಿದ್ದೇವೆಂದು ಹೇಳಿದ್ದಾರೆ. ನಾನು ಸರ್ಕಾರವನ್ನು ಕೇಳುವುದೇನೆಂದರೆ, ಆ ಸ್ಕೀಮ್‌ಗಳನ್ನು ತರಿಸಿಕೊಳ್ಳಿ, ಅವರು ಏನು ಮಾಡಿದ್ದಾರೆ ಎಂದು ತಿಳಿಸಿ. ಅದನ್ನೇ ನಾವೂ ಮಾಡೋಣವೆಂದು ತಮಗೆ ಒತ್ತಾಯ ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ನಮ್ಮ ಯಡಿಯೂರಪ್ಪನವರ ಪಕ್ಷದವರು ಒಂದೊಂದು ದಿನ ಒಂದೊಂದು ನಿಲುವನ್ನು ತಾಳುತ್ತಿದ್ದಾರೆ. ಇದು ನನಗೆ ಅರ್ಥವಾಗುತ್ತಿಲ್ಲ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಇವರು ಲೋಕಸಭೆಯಲ್ಲಿ ಕಟ್ ಮೋಶನ್ ಕೊಟ್ಟಿದ್ದರು. ಅದನ್ನು ಈ ಸಭೆಯಲ್ಲಿ ನಾನು ಪ್ರಸ್ತಾಪ ಮಾಡಿದ್ದೆ. ದೇಶದಲ್ಲಿರುವಂಥ ರೈತರ ಹಿತದೃಷ್ಟಿಯಿಂದ ನೀವು ಈ ಕಟ್ ಮೋಶನ್ ಮೂವ್ ಮಾಡಿ ಇದರಿಂದ ಸರ್ಕಾರ ಬಿದ್ದರೂ ಪರವಾಗಿಲ್ಲ ನಾನು ಅವರಿಗೆ ಹೇಳಿದ್ದೆ ಅದನ್ನು ಮಾಡದಿದ್ದರೆ ನೀವು ಆ ಪಕ್ಷಕ್ಕೆ ರಾಜೀನಾಮೆಯನ್ನು ಕೊಡಬೇಕೆಂದು ಸಹ ಅವರಿಗೆ ಹೇಳಿದ್ದೆ. ಆದರೆ ಕಟ್ ಮೋಶನ್ ಮೂವ್ ಮಾಡಿಲ್ಲ. ಇದಕ್ಕೆ ಕಾರಣ ಏನು? ಇದನ್ನು ಮಾಡದೇ, ಇಲ್ಲಿ ಮಾತೆತ್ತಿದರೆ ರೈತರು, ರೈತರು

ಎಂದು ಹೇಳುತ್ತಾರೆ. ಅವರ ಬಾಯಿಯಿಂದ ಬರುವಂಥ ಮಾತಿಗೆ ಅವರು ಬದ್ಧರಾಗಿರುವುದು ಅವರು ಕರ್ತವ್ಯವೆಂದು ನಾನಾದರೂ ಕೂಡ ಭಾವಿಸಿದ್ದೇನೆ. ಇವತ್ತು ಬಿಜೆಪಿ ಆಡಳಿತದಲ್ಲಿರುವಂಥ ನಾಲ್ಕು ರಾಜ್ಯಗಳಲ್ಲಿ ಗೊಬ್ಬರದ ಬೆಲೆಯನ್ನು ಹಳೆಯದರದಲ್ಲೇ ಮಾರಾಟ ಮಾಡುತ್ತೇವೆಂದು ಹೇಳಿಕೆಯನ್ನುಕೊಟ್ಟಿದ್ದರು. ಇದು ದೇಶದ ಎಲ್ಲಾ ಪತ್ರಿಕೆಗಳಲ್ಲೂ ಬಂದಿತು. ನನಗೆ ಅದನ್ನು ನೋಡಿ ಬಹಳ ಸಂತೋಷವಾಯಿತು. ಶ್ರೀ ಯಡಿಯೂರಪ್ಪನವರಿಗೆ ಸಾರ್ವಜನಿಕವಾಗಿ ಕೃತಜ್ಞತೆಯನ್ನು ಅರ್ಪಿಸಬೇಕೆಂದು ನಾನು ಮನಸ್ಸು ಮಾಡಿದ್ದೆ, ಆದರೆ ಇವತ್ತು ಪರಿಸ್ಥಿತಿ ತದ್ವಿರುದ್ಧವಾದ ರೀತಿಯಲ್ಲಿ ನಡೆದಿದೆ. ಇವರು ನಾವು ಪ್ರಸ್ತಾಪ ಮಾಡಿರುವುದು ಪತ್ರಿಕೆಗಳಲ್ಲಿ ತಪ್ಪಾಗಿ ವರದಿಯಾಗಿದೆ ಎಂದು ಹೇಳುತ್ತಾರೆ. ಅಂದರೆ ಯಾವಾಗಲೂ ಇವರ ವಿಚಾರದಲ್ಲಿ ಪತ್ರಿಕೆಗಳಲ್ಲಿ ತಪ್ಪು ವರದಿಯಾಗುತ್ತದೆಯೇ? ಮತ್ತೆ ಕಟ್ ಮೋಷನ್ ವಿಚಾರದಲ್ಲಿ ಮಾನ್ಯ ಅಡ್ವಾಣಿಯವರು ಏನು ಹೇಳಿದ್ದಾರೆ, ಎನ್ನತಕ್ಕಂಥಾದ್ದು ನಾನು ಇಲ್ಲಿ ಪ್ರಸ್ತಾಪ ಮಾಡಿದಾಗ ಅದೂ ಸಹ ಪತ್ರಿಕೆಗಳಲ್ಲಿ ತದ್ವಿರುದ್ಧವಾಗಿ ಪ್ರಕಟವಾಯಿತು. ಎಂದು ಆವೊತ್ತು ಹೇಳಿದರು. ಆದರೆ ಕಟ್ ಮೋಷನ್ ಮೂವ್ ಮಾಡಲಿಲ್ಲ. ಮೊನ್ನೆ ಕೇರಳದ ತ್ರಿವೆಂಡ್ರಮ್‌ನಲ್ಲಿ ಇವರು ಮಾತನಾಡಿದಂಥ ವಿಚಾರದಲ್ಲಿ ಸಹ ಪತ್ರಿಕೆಯಲ್ಲಿ ತಪ್ಪಾಗಿ ವರದಿಯಾಗಿದೆ, ಅದನ್ನು ಸರಿಪಡಿಸುತ್ತಿದ್ದೇವೆಂಬ ಮಾತನ್ನು ಹೇಳುತ್ತಿದ್ದಾರೆ. ಈ ರೀತಿಯಾದಂಥ ತದ್ವಿರುದ್ಧವಾದ ನೀತಿ, ಮತ್ತು ದ್ವಂದ್ವ ನೀತಿಯನ್ನು ಅನುಸರಿಸತಕ್ಕಂಥದ್ದು ಯಾರಿಗೇ ಆಗಲಿ ಶೋಭಾಯಮಾನವಾದುದಲ್ಲ. ಈ ದೇಶದ ರೈತರ ವಿಚಾರದಲ್ಲಿ ಈ ಬಗ್ಗೆ ಮಾಡಿರತಕ್ಕಂಥ ದೊಡ್ಡ ಅನ್ಯಾಯ ಎನ್ನತಕ್ಕಂಥ ಮಾತನ್ನು ನಾನು ಖಡಾಖಂಡಿತವಾಗಿ ಹೇಳಬೇಕಾಗುತ್ತದೆ. ಇಷ್ಟು ಲಘುವಾಗಿ ಭಾರತೀಯ ಜನತಾ ಪಾರ್ಟಿಯ ಮಿತ್ರರು ರೈತರನ್ನು ಭಾವಿಸಬಾರದು ಎನ್ನತಕ್ಕಂಥ ಮಾತನ್ನು ಕೂಡ ನಾನು ಒತ್ತಾಯ ಪೂರ್ವಕವಾಗಿ ಅವರಲ್ಲಿ ವಿನಂತಿ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಸಾಲ ಮನ್ನಾ ವಿಚಾರದಲ್ಲಿ ಇಲ್ಲಿ ಸಾಕಷ್ಟು ಚರ್ಚೆಯಾಗಿದೆ. ಈ ಒಣ ಚರ್ಚೆಯಿಂದ ಏನೂ ಅರ್ಥವಿಲ್ಲ. ಸಾಲ ನೀವು ವಜಾ ಮಾಡುವುದಕ್ಕೆ ಯಾವ ಸರ್ಕಾರ ಇದ್ದರೂ ಕೂಡ ಅದು ಆಗದಿರತಕ್ಕಂಥ ಮಾತು. ಅದರ ವಿಚಾರದಲ್ಲಿ ಚರ್ಚೆ ಅನಾವಶ್ಯಕ. ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ವಜಾಮಾಡತಕ್ಕಂಥಾದ್ದಕ್ಕೆ ಏನಾದರೂ ಕೂಡ ಸರ್ಕಾರ ಸಿದ್ಧವಿದ್ದರೆ ದಯವಿಟ್ಟು ಅದನ್ನು ಹೇಳಿ. ನಾನು ವರ್ಕಬಲ್ ಪ್ರಪೋಜಿಶನ್ ಬಗ್ಗೆ ಹೇಳುತ್ತಿದ್ದೇನೆ. ಮೊದಲು ರೈತರಿಗೆ ಶೇಕಡ 7ರಷ್ಟು ಬಡ್ಡಿ ದರದಲ್ಲಿ ಸಾಲ ಸಿಗುತ್ತಿತ್ತು. ಮಾರ್ಚಿ 31ರೊಳಗೆ ಯಾವ್ಯಾವ ರೈತರು ಸಾಲ ತೀರುವಳಿ ಮಾಡಿದರೆ ಅವರೆಲ್ಲರಿಗೂ ಶೇಕಡ 7ರಷ್ಟು ಬಡ್ಡಿ ಇತ್ತು. ದಯವಿಟ್ಟು ಈ ಯೋಜನೆಯನ್ನು ಪುನಃ ಜಾರಿಗೆ ತನ್ನಿ. ಮತ್ತು ಇರತಕ್ಕಂಥ ನಾನು ಏನಿದೆ? ಈ ಹೊರೆಜಾಸ್ತಿಯಾಗಿದೆ. ಒಂದೇ ಕಂತಿನಲ್ಲಿ ಸಾಲದ ಹೊರೆಯನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಿಲ್ಲ. ಯಾವ ರೈತನಿಗೂ ಆ ಶಕ್ತಿ ಇಲ್ಲ. ಆ ಕಾರಣದಿಂದ ಈಗಿರತಕ್ಕಂಥ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಒಂದೇ ಕಂತಿನಲ್ಲಿ ವಜಾ ಮಾಡತಕ್ಕಂಥಾದ್ದನ್ನು ದಯವಿಟ್ಟು ಜಾರಿಗೆ ತನ್ನಿ. ಈ ಕೆಲಸವನ್ನು ದಯವಿಟ್ಟು ಮಾಡಿ. ಇದರಿಂದ ಸಾಕಷ್ಟು ಜನ ರೈತರಿಗೆ ಹೊರೆಯನ್ನು ಇಳಿಸಿದಂತಾಗುತ್ತದೆ. ಮತ್ತು ರೈತರಿಗೆ ಇದರಿಂದ ಪ್ರಯೋಜನವಾಗುತ್ತದೆ. ಅವರ ಆಸ್ತಿ -ಪಾಸ್ತಿ ಏನು ಹರಾಜಾಗುತ್ತದೆ. ಅದನ್ನೂ ಕೂಡ ನೀವು ನಿಲ್ಲಿಸಿದಂತಾಗುತ್ತದೆ. ನಾನು ವರ್ಕಬಲ್ ಪ್ರಮೋಜಿಶನ್ ಹೇಳುತ್ತಿದ್ದೇನೆ. ಆದ್ದರಿಂದ ಇದನ್ನು ಸರ್ಕಾರ ಗಮನಿಸಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಅವರನ್ನು ವಿನಂತಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರು, ನಾನು ಎರಡು ಸಂಗತಿಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಬಗ್ಗೆ ಭಾರತೀಯ ಜನತಾ ಪಾರ್ಟಿಯ ನಿಲುವು ಏನಿದೆ, ಎಂಬುದನ್ನು ಏನು ಚರ್ಚೆ ಮಾಡುತ್ತಿದ್ದಿರೋ ಮತ್ತು ಪ್ರಸ್ತಾಪ ಮಾಡುತ್ತಿದ್ದಾರೋ ಅದನ್ನು ತಪ್ಪೆಂದು ಹೇಳುವುದಕ್ಕೆ ನಾನು ಇಚ್ಛಿಪಡುವುದಿಲ್ಲ. ಮೊದಲನೆಯದಾಗಿ, ಭಾರತೀಯ ಜನತಾ ಪಾರ್ಟಿ ಲೋಕಸಭೆಗೆ ಕಟ್ ಮೋಷನ್ ಮಾಡಬೇಕೋ ಬಿಡಬೇಕೋ ಎಂಬುದು ನಮ್ಮ ಪಕ್ಷಕ್ಕೆ ಸಂಬಂಧಪಟ್ಟಂಥ ವಿಚಾರ. ಇದು ಲೋಕಸಭೆಯೊಳಗೆ ಬಹಳ ಸ್ಪಷ್ಟವಾಗಿ ಚರ್ಚೆ ಆಗಿದೆ. ಏನೆಂದರೆ ಈ ರೀತಿ ಸಣ್ಣ ರೈತ, ದೊಡ್ಡ ರೈತ ಎಂದು ಒಡೆಯುವುದು ಸರಿಯಲ್ಲ. ಗೊಬ್ಬರದ ಬೆಲೆಯನ್ನು 40 ಪರ್ಸೆಂಟ್ ಏರಿಸಿದ ನಂತರ 10 ಪರ್ಸೆಂಟ್‌ಗೆ ಇಳಿಸುವುದರಿಂದ ರೈತನಿಗೆ ಅನುಕೂಲವಾಗುವುದಿಲ್ಲ, ಇವ್ಹೊತ್ತೂ ಸಹ ಈ ಬೆಲೆ ಏರಿಕೆಯಲ್ಲಿ ಏನು ಮಾಡಿದ್ದಾರೆ? ಇದು ಸರಿಯಲ್ಲ ಸಬ್ಸಿಡಿಯನ್ನು ವಾಪಸ್ಸು ಪಡೆದರೆ ತಪ್ಪಾಗುತ್ತದೆ. ಎನ್ನುವುದನ್ನು ನಾವು ನ್ಯಾಷನಲ್ ಎಕ್ಸಿಕ್ಯೂಟಿವ್‌ನಲ್ಲಿ ತೀರ್ಮಾನ ಮಾಡಿದ್ದೇವೆ. ಪತ್ರಿಕಾ ಹೇಳಿಕೆಯಲ್ಲಿ ಇದರ ವರದಿ ಬಂದಾಗ ಅದು ತಪ್ಪಾಗಿದ್ದುದರಿಂದ ಎಲ್.ಕೆ. ಅಡ್ವಾಣಿಯವರು ಕರೆಕ್ಟ್ ಮಾಡಿದ್ದಾರೆ. ಎರಡನೆಯದು, ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ. ಈಗ ನಮ್ಮ ಪಕ್ಷದ ಸರ್ಕಾರ ಮಧ್ಯ ಪ್ರದೇಶದಲ್ಲಿದೆ. ಅಲ್ಲಿನ ಚೀಫ್ ಸೆಕ್ರೆಟರಿ ಹತ್ತಿರ ಸಂಪರ್ಕ ಮಾಡಿ. ನಾನು ಈ ಸದನದಲ್ಲಿ ಏನು ಹೇಳಿದೆ. ಸುಮಾರು 640ಕೋಟಿ ರೂಪಾಯಿಗಳವರೆಗೆ, ರೈತನ ಸಾಲ ಹತ್ತು ಸಾವಿರ ರೂಪಾಯಿಗಳವರೆಗೆ, ಸಣ್ಣ ರೈತ ಇರಲಿ, ದೊಡ್ಡ ರೈತ ಇರಲಿ, ಎಲ್ಲಾ ರೈತರ ಸಾಲವನ್ನು ನಾವು ಮನ್ನಾ ಮಾಡಿದ್ದೇವೆ. ಅದು ಆಗಿಲ್ಲ ಎನ್ನುವುದಾದರೆ ಅಧಿಕೃತವಾಗಿ ಅಲ್ಲಿನ ಮುಖ್ಯಮಂತ್ರಿಗಳಿಂದ ವರದಿ ತರಿಸಿಕೊಂಡು ಅದು ಸುಳ್ಳಾಗಿದ್ದಲ್ಲಿ ನಾನು ಕ್ಷಮಾಪಣೆ ಕೇಳಿಕೊಳ್ಳುವುದಕ್ಕೆ ಸಿದ್ಧನಾಗಿದ್ದೇನೆ. ಏಕೆಂದರೆ, ಒಂದು ಸರ್ಕಾರದ ಬಗ್ಗೆ ಇಲ್ಲಿ ಚರ್ಚೆಯಾಗಬೇಕಾದರೆ ನಾನು ಏನೂ ಬೇಕಾದರೂ ಹೇಳಬಹುದು, ನಮ್ಮ ವಿರೋಧಪಕ್ಷದ ನಾಯಕರು ಏನು ಬೇಕಾದರೂ ಹೇಳಬಹುದು. ಆದರೆ, ಸರ್ಕಾರಕ್ಕೆ ವರದಿ ತರಿಸಿಕೊಂಡ ನಂತರ ಸತ್ಯ ಸಂಗತಿ ಹೇಳಬಹುದು. ಆದುದರಿಂದ, ನಾನು ಹೇಳುವಂಥದ್ದು, ರಾಜಾಸ್ಥಾನ, ಹಿಮಾಚಲ ಪ್ರದೇಶದಲ್ಲಿ ಹತ್ತು ಸಾವಿರ ರೂಪಾಯಿಗಳವರೆಗೆ ಪೂರ್ಣವಾಗಿ ಸಾಲ ಮನ್ನಾ ಮಾಡಿದ್ದೇವೆ. ಬೇಕಾದರೆ ವರದಿಯನ್ನು ತರಿಸಿಕೊಳ್ಳಿ. ನಮ್ಮ ಸರ್ಕಾರ ಇವ್ಹೊತ್ತು ಸಾಲ ಮನ್ನಾ ಆಗಿದೆಯೆಂದು ಲೋಕಸಭಾ ಚುನಾವಣೆ ಸಮಯದಲ್ಲಿ ಆಶ್ವಾಸನೆ ಜಾರಿಗೆ ತಂದಿದೆ. ನಾನು ಇವ್ಹೊತ್ತು ಸರ್ಕಾರಕ್ಕೆ ಒತ್ತಾಯ ಮಾಡುತ್ತಿರುವಂಥಾದ್ದು ರಾಜ್ಯದ ರೈತರ ಸಾಲ ಮನ್ನಾ ಮಾಡುವುದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಳ್ಳಿ. ಸ್ಪಷ್ಟವಾಗಿ ಸಾಲ ಮನ್ನಾ ಮಾಡುತ್ತೀರೋ? ಇಲ್ಲವ್ಹೋ ?ಎಂಬುದನ್ನು ಹೇಳಿ. ಲೋಕಸಭಾ ಚುನಾವಣೆ ಸಮಯದಲ್ಲಿ ಮತ್ತು ಈ ಸದನದಲ್ಲಿ ಸ್ಪಷ್ಟ ಮಾಡಿದ್ದೀರಿ. ಸಣ್ಣ ರೈತರ ಸಾಲ ಹತ್ತು ಸಾವಿರದ ಒಳಗಿರುವಂಥದ್ದು ವಸೂಲು ಮಾಡುವುದಿಲ್ಲವೆಂದು ಹೇಳಿದರೂ ಸಹ ಇಂದು ನೋಟೀಸ್ ಕೊಡುತ್ತಿದ್ದಾರೆ. ರೈತರ ಆಸ್ತಿಗಳು ಜಪ್ತಿಯಾಗುತ್ತಿವೆ. ಇವ್ಹೊತ್ತಾದರೂ ಒಂದು ಅಧಿಕೃತ ಆದೇಶವನ್ನು ಸಣ್ಣ ರೈತರ ಸಾಲ ಮನ್ನಾ ಮಾಡುವುದಿಲ್ಲ, ಅವನಿಗೆ ಪರಿಹಾರ ಒದಗಿಸಿಕೊಡುತ್ತೇವೆ ಎನ್ನುವುದರ ಬಗ್ಗೆ ಕಳುಹಿಸಿಕೊಂಡಿ. ಇನ್ನೊಂದು ವಿಚಾರ ಸಬ್ಸಿಡಿ ಬಗ್ಗೆ. ನಾವು ಕೇಂದ್ರ ಸರ್ಕಾರಕ್ಕೆ ಮನವಿಕೊಡುವಂಥ ಸಂದರ್ಭದಲ್ಲಿ, ಇವ್ಹೊತ್ತು ನಮಗೆ ಬೇಕಾಗಿರುವುದು ನಲವತ್ತು ಕೋಟಿ ರೂಪಾಯಿಗಳು, ಆದರೆ, ಕೇಂದ್ರಸರ್ಕಾರ ಕೊಟ್ಟಿರುವುದು ಕೇವಲ ಎಂಟು

ಕೋಟಿ ರೂಪಾಯಿಗಳು. ಈ ವರ್ಷ ಮುಗಿಯಿತು. ಸಣ್ಣ ರೈತ, ಅತಿ ಸಣ್ಣ ರೈತನಿಗೂ ಸಹಾ ಸಬ್ಸಿಡಿ ರೂಪದಲ್ಲಿ ಗೊಬ್ಬರ ಸಿಗುತ್ತಿಲ್ಲ. ಆದುದರಿಂದ, ಈ ಇಬ್ಬಗೆಯ ನೀತಿಯ ಬಗ್ಗೆ ನಾವು ಪ್ರತಿಭಟನೆ ಮಾಡಿ ಮನವಿಯನ್ನು ಕೇಂದ್ರ ಸರ್ಕಾರಕ್ಕೆ ತಲುಪಿಸುತ್ತೇವೆ. ಬಿ.ಜೆ.ಪಿ.ಯ ಸ್ಪಷ್ಟವಿದೆ. ದಯಮಾಡಿ, 30 ಪರ್ಸೆಂಟ್ ಸಬ್ಸಿಡಿ ಏನಿದೆ? ಅದನ್ನು ಕಡಿಮೆ ಮಾಡಿ ಹಳೆಯ ಬೆಲೆಯಲ್ಲಿ ಗೊಬ್ಬರ ಮಾರಾಟ ಮಾಡುವ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಯೇ? ಈ ಬಗ್ಗೆ ನಿಲುವು ಏನೆಂದು ಸ್ಪಷ್ಟ ಮಾಡಬೇಕು. ಬಿ.ಜೆ.ಪಿ. ನಿಲುವು ಏನೆಂದು ಕೇಂದ್ರಕ್ಕೆ ಒತ್ತಾಯ ಮಾಡಿ ಸ್ಪಷ್ಟ ಮಾಡಿದ್ದೇವೆ. ನಾವು ನಿರ್ಣಯ ಮಾಡಿದ್ದೇವೆ.

(ಗೊಂದಲ)

ಅಧ್ಯಕ್ಷರು : ಹೀಗಾದರೆ ನಾನು ಈಗ ಕ್ಲೋಸರ್ ಮೋಷನ್ ಮೂವ್ ಮಾಡಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇವೊತ್ತು ದೇಶದಲ್ಲಿರತಕ್ಕಂಥಾದ್ದು ಎರಡೇ ಪಕ್ಷಗಳು. ಒಂದು ಬಿ.ಜೆ.ಪಿ. ಇನ್ನೊಂದು ಕಾಂಗ್ರೆಸ್ ಪಕ್ಷ. ಅದು ಜನತೆಗೂ ಸ್ಪಷ್ಟವಾಗಿದೆ.

ಶ್ರೀ ಎನ್. ಜಿ. ನಾಯಕ್ : ಜನತಾ ದಳದ ನಾಯಕರು ಕಟ್ ಮೋಷನ್ ಮೂವ್ ಮಾಡಿದಾಗ, ನೀವು ಏತಕ್ಕೆ ಮಾಡಲಿಲ್ಲ ? ನಿಮಗೆ ಜವಾಬ್ದಾರಿ ಇರಲಿಲ್ಲವೇ?

(ಗೊಂದಲ)

ಅಧ್ಯಕ್ಷರು : ಆರ್ಡರ್ ..... ಆರ್ಡರ್ ..... ಈಗ ಕಾನಡೆ ಯವರು ಮಾತನಾಡುತ್ತಾರೆ.

ಶ್ರೀ ಜಿ.ಎಂ. ಕಾನಡೆ : ಅಧ್ಯಕ್ಷರೇ, ಈ ಬಿಜೆಪಿಯವರು ತಮ್ಮದನ್ನೇ ಹೇಳುತ್ತಾರೆ. ಇಲ್ಲಿ ಎಲ್ಲೋ ಒಂದಿಬ್ಬರು ಇದ್ದಾರೆ ಇವರಿಗೊಬ್ಬರಿಗೆ ರೈತರ ಮೇಲೆ ಅನುಕಂಪವಿದೆಯೆಂದಲ್ಲ. ನಾವು ಕೂಡ 1983ರಿಂದಲೂ ರೈತರ ಬಗ್ಗೆ ಹೋರಾಟ ಮಾಡಿಕೊಂಡು ಬಂದಿದ್ದೇವೆ. 1983ರಲ್ಲಿ ಬಿಜೆಪಿಯವರು ಆಗಿನ ಸರ್ಕಾರಕ್ಕೆ ಸಪೋರ್ಟ್ ಕೊಟ್ಟಾಗ ಬಾಯಿ ಮುಚ್ಚಿಕೊಂಡು ಸುಮ್ಮನೆ ಕುಳಿತದ್ದರು. ಈಗ ರೈತರ ಬಗ್ಗೆ ನಾವು ಹೋರಾಟ ಮಾಡುತ್ತೇವೆಂದು ಪ್ರಚಾರ ತೆಗೆದುಕೊಳ್ಳಲು ಹೊರಟಿದ್ದಾರೆ. ಆದರೆ ಇವರಿಗಿಂತ ಸಾವಿರಪಟ್ಟು, ನಮ್ಮ ಕರ್ನಾಟಕ ಸರ್ಕಾರದವರಿಗೆ ರೈತರ ಬಗ್ಗೆ ಅನುಕಂಪ ಇದೆ. ಇಲ್ಲದಿದ್ದರೆ ಅವರ ಪಕ್ಷವಿರುವ ರಾಜಾಸ್ಥಾನದಲ್ಲಿ ಏನುಮಾಡಿದ್ದಾರೆ ಅದನ್ನು ಅವರು ಮೊದಲು ಹೇಳಬೇಕು. ಮಧ್ಯಪ್ರದೇಶದಲ್ಲಿ ಅವರ ಸರ್ಕಾರವಿದೆ. ಅಲ್ಲಿ ಏನು ಮಾಡಿದ್ದಾರೆ. ಹೇಳಲಿ ಅದು ಬಿಟ್ಟು ಒಬ್ಬೊಬ್ಬರೇ ಕೂಗಾಡುವುದು. ಸುಮ್ಮನೆ ಪ್ರಚಾರ ತೆಗೆದುಕೊಳ್ಳುವುದು ಏನಿದೆ. ಇದು ಸರಿಯಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇದು ನಿಮಗೆ ಗೌರವ ತರುವಂತಹ ಮಾತಲ್ಲ. ನೀವು ಒಬ್ಬ ಸದಸ್ಯರ ಬಗ್ಗೆ ಮಾತನಾಡುವುದಕ್ಕೆ....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಅಧ್ಯಕ್ಷರೆ ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಅಧಿಕೃತವಾಗಿ ಹೇಳಲಿ, ಮಧ್ಯಪ್ರದೇಶದಲ್ಲಿ ನಮ್ಮದೆ ಆದಂತಹ ಸರ್ಕಾರ ಈ ಬಗ್ಗೆ ಒಂದು ಸ್ಕೀಮ್‌ನ್ನು ತಂದು ಹತ್ತು ಸಾವಿರದವರೆಗಿನ ಸಾಲ

ವನ್ನು ಮನ್ನಾ ಮಾಡಿಲ್ಲ ಇದು ಸತ್ಯಕ್ಕೆ ದೂರವಾದುದು. ಇದು ಸುಳ್ಳು ಎಂದು ಮಾನ್ಯ ಮುಖ್ಯಮಂತ್ರಿಗಳು ಅಧಿಕೃತವಾಗಿ ಹೇಳಲಿ, ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಈ ರೀತಿ ಬೇಜಾವಾಬ್ದಾರಿಯಿಂದ ಒಂದು ಪಕ್ಷದ ಸರ್ಕಾರದ ಬಗ್ಗೆ ಒಂದು ಪಕ್ಷದ ಬಗ್ಗೆ ಆರೋಪ ಮಾಡುವುದು ಸರಿಯಲ್ಲ. ನಮ್ಮಲ್ಲಿ ರೈತರ ಸಾಲಮನ್ನ ಮಾಡುವಲ್ಲಿ 10 ಸಾವಿರದ ವರೆಗೆ ಎಲ್ಲಾ ನಿಯಮಗಳನ್ನು ತೆಗೆದುಹಾಕಿದ್ದೇವೆ. ಎಂದು ಎಲ್ಲೂ ಹೇಳಲಿಲ್ಲ. ಇದರ ಬಗ್ಗೆ ಅಧಿಕೃತವಾಗಿ ಮಾನ್ಯಮುಖ್ಯಮಂತ್ರಿಗಳು ಹೇಳಿಕೆ ಕೊಡಲಿ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಸಭಾಧ್ಯಕ್ಷರೆ. ತಮ್ಮ ಮುಖಾಂತರ ಶ್ರೀಮಾನ್ ಯಡಿಯೂರಪ್ಪನವರಲ್ಲಿ ಒಂದು ವಿನಂತಿಯನ್ನು ಮಾಡಲು ಬಯಸುತ್ತೇನೆ. ಏನೆಂದರೆ. ಸಾಲ ಮನ್ನಾ ಮಾಡುವ ಬಗ್ಗೆ ಆಗಲಿ ಮತ್ತು ಗೊಬ್ಬರದ ವಿಚಾರದಲ್ಲಿ ಎರಡು ಬೆಲೆ ನಿಗದಿ ಮಾಡುವ ಬಗ್ಗೆಯಾಗಲಿ, ಇದು ಒಂದು ರಾಷ್ಟ್ರೀಯ ನೀತಿ. ಯಾವುದೇ ಒಂದು ಸರ್ಕಾರ, ರಾಜ್ಯ ಸರ್ಕಾರ ತನ್ನದೆ ಆದಂತಹ ರೀತಿಯಲ್ಲಿ ಮಾಡುವಂತಹ ಸ್ಥಿತಿಯಲ್ಲಿ, ಎರಡು ವರ್ಷದಿಂದ ಈ ವಿಚಾರದ ಬಗ್ಗೆಚರ್ಚೆ ನಿರಂತರವಾಗಿ ನಡೆಯುತ್ತಿದೆ. ಒಂದು ಹಂತದಲ್ಲಿ ಶ್ರೀಮಾನ್ ಯಡಿಯೂರಪ್ಪನವರು ಈ ಸದನದಲ್ಲಿ ಏನು ಹೇಳಿದ್ದರೆಂದರೆ, ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ, ಈ ಪ್ರಶ್ನೆ ಚರ್ಚೆಯಾದಾಗ ಅವರು ಹೇಳಿದ್ದರು, ಮಧ್ಯಪ್ರದೇಶದಲ್ಲಿರತಕ್ಕ ನಮ್ಮ ಪಕ್ಷದ ಸರ್ಕಾರ, ರಾಜಾಸ್ತಾನದಲ್ಲಿರುವ ನಮ್ಮ ಪಕ್ಷದ ಸರ್ಕಾರ ಕೇಂದ್ರ ಸರ್ಕಾರದ ಸೂತ್ರಗಳು ಏನೆ ಇದ್ದರೂ ಕೂಡ 10 ಸಾವಿರದವರೆಗೆ ಇರತಕ್ಕ ರೈತರ ಎಲ್ಲಾ ಸಾಲವನ್ನೂ ರದ್ದು ಮಾಡಿದ್ದಾರೆ. ಎಂದು ಆ ಸವಾಲನ್ನು ನಾನು ಇಲ್ಲಿ, ಈ ಕುರ್ಚಿಯಲ್ಲಿ ಕುಳಿತುಕೇಳಿದ್ದೆ. ನಾನು ಆ ರೀತಿ ಏನಾದರೂ ನಿಮ್ಮ ಸರ್ಕಾರ ಮಧ್ಯಪ್ರದೇಶದಲ್ಲಿ ಮಾಡಿರುವ ಆಜ್ಞೆಯನ್ನು ತರಿಸಿಕೊಡುತ್ತೀರಾ ಎಂದು ಕೇಳಿದಾಗ ತರಿಸಿಕೊಡುತ್ತೇವೆಂದು ಅವರೇ ಹೇಳಿದ್ದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಒಂದು ನಿಮಿಷ ಈಲ್ಡ್ ಆಗಿ. ಕಾಗೋಡು ತಿಮ್ಮಪ್ಪನವರು ಹಿರಿಯ ಸದಸ್ಯರಾಗಿದ್ದಾರೆ. ಅವರು ಆಡಳಿತ ಪಕ್ಷದಲ್ಲಿ ಸಹ ಇದ್ದಾರೆ. ಈ ಬಗ್ಗೆ ಅಧಿಕೃತವಾದ ದಾಖಲೆಯನ್ನು ತರಿಸಿ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಡಲಿ ಅಥವಾ ಸಂಬಂಧಪಟ್ಟ ಇಲಾಖೆಯ ಸಚಿವರು ದಾಖಲೆ ತರಿಸಿ ಹೇಳಿಕೆಯನ್ನು ಕೊಡಲಿ. ನಾನು ಏತಕ್ಕೆ ತರಸಿಕೊಡಲಿ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ಶ್ರೀ ಯಡಿಯೂರಪ್ಪನವರು ಈ ಮಾತನ್ನು ಈ ಸದನದಲ್ಲಿ ಹೇಳದೆ ಹೋಗಿದ್ದರೆ ನಾನು ಈವತ್ತು ಈ ಮಾತನ್ನು ಕೇಳುತ್ತಿರಲಿಲ್ಲ, ಅವರು ಅವತ್ತು ಈ ಭಾಷೆಯನ್ನು ಬಳಸಿದ್ದಾರೆ. ಅವರ ಸರ್ಕಾರ ಮಧ್ಯಪ್ರದೇಶದಲ್ಲಿ ಮಾಡಿರತಕ್ಕ ಆಜ್ಞೆಯನ್ನು ಈ ಸದನಕ್ಕೆ ತಂದು ಇಡುತ್ತೇನೆಂದು ಹೇಳಿದ್ದರು. ಆದರೆ ಆ ಕೆಲಸವನ್ನು ಅವರು ಮಾಡಲಿಲ್ಲ. ಈಗಲೂ ನಾನು ಅವರನ್ನು ಕೇಳುತ್ತೇನೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಈ ರೀತಿ ಬಿಜೆಪಿಯನ್ನು ಟೀಕೆ ಮಾಡುವುದರಿಂದ ನೀವು ರೈತರಿಗೆ ಅನುಕೂಲ ಮಾಡಿದಂತಾಗುವುದಿಲ್ಲ. ಬಿಜೆಪಿ

ಅಧಿಕಾರಕ್ಕೆ ಬಂದಿರತಕ್ಕ ರಾಜ್ಯಗಳಲ್ಲಿ ಏನು ಮಾಡಬೇಕೆಂದು ನಮಗೆ ಗೊತ್ತಿದೆ. ಆದರೆ ನೀವು ಏನು ಮಾಡುತ್ತೀರಾ, ಅದನ್ನು ಹೇಳಿ?

ಅಧ್ಯಕ್ಷರು : ಇವರು ಏನು ಮಾಡಿದ್ದಾರೆ. ಏನು ಮಾಡುತ್ತಾರೆ ಎನ್ನುವುದರ ಬಗ್ಗೆ ಈಗ ಮುಖ್ಯಮಂತ್ರಿಗಳು ಹೇಳುತ್ತಾರೆ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ನಾನು ಈಗಲೂ ಹೇಳುತ್ತೇನೆ, ಆ ಕಾಲದಲ್ಲಿ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು ಕೂಡ ಒಪ್ಪಿದಂತಹ ಸೂತ್ರವನ್ನೇ ಕೊಟ್ಟಿದ್ದರು. ಈಗ ಉತ್ತರ ಪ್ರದೇಶದಲ್ಲಿ ಅವರ ಸರ್ಕಾರವಿದೆಯಲ್ಲಾ, ಅವರು ಇಷ್ಟರೊಳಗೆ ಮಾಡಿರಬೇಕಲ್ಲ, ಆದರೆ ಏನು ಮಾಡಿಲ್ಲ, ಗೊಬ್ಬರದ ಬಗ್ಗೆ ವಿಶೇಷವಾಗಿ ಹೇಳುತ್ತಾರೆ. ಈಗ ಎಲ್ಲಾ ಪಕ್ಷಗಳ ಸದಸ್ಯರ ನಿಯೋಗ ಹೋಗಿದ್ದಾಗ, ಕೇಂದ್ರಸರ್ಕಾರದ ಮಂತ್ರಿಗಳು ವಾಸ್ತವವಾಗಿ ಈ ಸಿದ್ಧಾಂತವನ್ನು ಒಪ್ಪಿಕೊಂಡಿದ್ದಾರೆ. ನಮ್ಮ ವಿರೋಧಪಕ್ಷದ ನಾಯಕರು ಆವತ್ತು ಈ ಮಾತನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಈಗಿನ ಪರಿಸ್ಥಿತಿಯಲ್ಲಿ ಇದು ಅನಿವಾರ್ಯವಾದ ಪ್ರಸಂಗವಾಗಿದೆ ಎನ್ನತಕ್ಕದನ್ನು ಅವರು ಮನವರಿಕೆ ಮಾಡಿಕೊಟ್ಟಿದ್ದಾರೆ. ಆದುದರಿಂದ ಇದು ಎಲ್ಲಾ ಪಕ್ಷಗಳಿಗೂ ಸೇರಿದಂತೆ ಪ್ರಶ್ನೆ.

ನೀವು ಹಿಂದೆ ವಿರೋಧಪಕ್ಷದಲ್ಲಿ ಕುಳಿತು ಕೆಲಸ ಮಾಡುತ್ತಿದ್ದೀರಿ. ಆದರೆ ನಂತರದಲ್ಲಿ ಕೇಂದ್ರದಲ್ಲಿ ಅಧಿಕಾರ ಮಾಡಿಯಾಗಿದೆ, ರಾಜ್ಯಗಳ ಅಧಿಕಾರ ಮಾಡುತ್ತಿದ್ದೀರಿ. ಆದುದರಿಂದ ಈ ಗೊಬ್ಬರದ ವಿಚಾರ ಮತ್ತು ಸಾಲ ಮನ್ನಾ ಮಾಡತಕ್ಕಂತಹ ವಿಚಾರ ಒಂದು ರಾಜ್ಯಕ್ಕಲ್ಲ, ಎಲ್ಲ ರಾಜ್ಯಗಳಿಗೂ ಸಂಬಂಧಪಟ್ಟಿರುವಂತಹ ಪ್ರಶ್ನೆ. ಆದ್ದರಿಂದ ಇದನ್ನು ಸಮಗ್ರವಾಗಿ ವಿಚಾರ ಮಾಡಬೇಕೇ ವಿನಃ ನೀವು ಈ ರೀತಿ ಮಾಡಿ ಎಂದರೆ ಬಹಳ ಕಷ್ಟವಾಗುತ್ತದೆ. ರೈತರ ಬಗ್ಗೆ ನಿಮಗೆ ಎಷ್ಟು ಕಳಕಳಿ ನಮಗೂ ಇದೆ. ನಿಮ್ಮ ಭಾವನೆಗಳು ನಮಗೆ ಅರ್ಥವಾಗುತ್ತದೆ. ನಾವು ಕೇಂದ್ರಸರ್ಕಾರಕ್ಕೆ ಏನು ಹೇಳಬೇಕೋ ಅದನ್ನು ಹೇಳುತ್ತೇವೆ. ಒಟ್ಟಿನಲ್ಲಿ ರೈತರ ಪರವಾಗಿರುವಂತಹ ಈ ವಿಚಾರದಲ್ಲಿ ಒಟ್ಟಾಗಿ ತೀರ್ಮಾನ ಮಾಡೋಣ.

ಶ್ರೀ ಎಸ್. ಬಂಗಾರಪ್ಪ : ಸನ್ಮಾನ್ಯ ಅಧ್ಯಕ್ಷರೆ, ಇದು ಪದೇ ಪದೇ ಉದ್ಭವವಾಗಿರುವಂತಹ ಪ್ರಶ್ನೆ. ಸರ್ವಪಕ್ಷಗಳ ನಿಯೋಗ ದೆಹಲಿಯಿಂದ ಬಂದ ಮೇಲೆ ನನಗೆ ನೆನಪಿರುವಂತೆ ಆ ಸದನದಲ್ಲೋ ಈ ಸದನದಲ್ಲೋ ಈ ಸದನದಲ್ಲೋ ಹೇಳಿಕೆ ಕೊಟ್ಟಿದ್ದೇನೆ. ಮೊದಲು ಸರ್ವಪಕ್ಷಗಳ ನಿಯೋಗ ದೆಹಲಿಗೆ ಹೋದಾಗ ಬರೀ ಗೊಬ್ಬರದ ವಿಚಾರದಲ್ಲಿ ಮಾತ್ರ, ಸಾಲ ಮನ್ನಾ ವಿಚಾರ ಇರಲಿಲ್ಲ. ಆಗ ನಾನು ಹೇಗಿದ್ದರೂ ಪ್ರಧಾನ ಮಂತ್ರಿಗಳು, ಹಣಕಾಸಿನ ಸಚಿವರು ಮತ್ತು ಕೃಷಿ ಸಚಿವರು ಇವರ ಹತ್ತಿರ ನಾವು ಹೋಗುತ್ತಿದ್ದೇವೆ. ಆಗ ಈ ಸಾಲ ಮನ್ನಾ ವಿಚಾರವನ್ನು ಪ್ರಸ್ತಾಪ ಮಾಡಿ ಎಂದು ನಾನೇ ಸಲಹೆ ಕೊಟ್ಟೆ. ಆ ಸದನದ ಮತ್ತು ಈ ಸದನದ ಮಾನ್ಯ ವಿರೋಧಪಕ್ಷದ ನಾಯಕರುಗಳು ವಿವಿಧಪಕ್ಷಗಳ ನಾಯಕರು ಎಲ್ಲಾ ಸೇರಿ ನಾವು ಹೋದ ಮೇಲೆ ತಮ್ಮ ಎದುರಿಗೆ ನಾವು ಇದರ ಬಗ್ಗೆ ಅಲ್ಲಿ ಪ್ರಸ್ತಾಪ ಮಾಡಿದ್ದೇವೆ. ಅವರು ಹೇಳಿರುವಂತಹ ವಿಚಾರದಲ್ಲಿ ತಾವು ಈಗಾಗಲೇ ಆ ದಿವಸ ವಿವರಗಳನ್ನು ಕೊಟ್ಟಿದ್ದೀರಿ. ಆದ್ದರಿಂದ ಆ ವಿವರಗಳಿಗೆ ನಾನು ಈ ಸಂದರ್ಭದಲ್ಲಿ ಹೋಗುವುದಿಲ್ಲ. ಕರ್ನಾಟಕ ರಾಜ್ಯದ ರೈತರ ಮಟ್ಟಿಗೆ ಸೀಮಿತಗೊಳಿಸಿ ಹೇಳಬೇಕಾದರೆ ಮಾನ್ಯ

ವಿರೋಧಪಕ್ಷದ ನಾಯಕರಿಗೆ ನಮ್ಮ ಪಕ್ಷಕ್ಕೆ ಬಿ.ಜೆ.ಪಿ. ಸದಸ್ಯರುಗಳಿಗೆ ವಾಟಾಳ್ ನಾಗರಾಜ್ ರವರಿಗೆ ಮತ್ತು ಉಳಿದಿರತಕ್ಕಂತಹ ನಮ್ಮ ಮಾನ್ಯ ಮಿತ್ರರುಗಳಿಗೆ ಆ ಕಡೆ ಈ ಕಡೆ ಕುಳಿತಿರುವಂತಹವರು ಎಲ್ಲರಿಗೂ ಕೂಡ ರೈತರ ಬಗ್ಗೆ ಕಳಕಳಿ ಇದೆ. ರೈತರಿಗೆ ಸಹಾಯವಾಗುವಂತಹ ಒಂದು ಸ್ಕೀಮ್‌ಗಳನ್ನು ಶ್ರೀಮಾನ್ ವಿ.ಪಿ. ಸಿಂಗ್‌ರವರು ಪ್ರಧಾನಮಂತ್ರಿಗಳಾಗಿದ್ದ ಕಾಲದಲ್ಲಿ ಈ ದೇಶದಲ್ಲಿ ಜಾರಿಗೆ ತಂದರು. ಅದು ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ 10 ಸಾವಿರದ ಒಳಗಡೆ ಇರುವಂಥಹ ಸಾಲ ಮತ್ತು ಅದೇರೀತಿ ಸಹಕಾರ ಕ್ಷೇತ್ರದಲ್ಲಿ ಇರುವಂತಹ ಸಾಲವನ್ನು ಮನ್ನಾ ಮಾಡಬೇಕೆಂದು ಇದಕ್ಕಾಗಿ ಬಜೆಟ್ ಪ್ರಾವಿಷನ್‌ನ್ನು 1,500 ಕೋಟಿ ರೂಪಾಯಿ ಆ ಕಾಲದಲ್ಲಿ ಮಾಡಿದರು, as far as the loan taken from National Banks are concerned, ಆಗ ಇಲ್ಲಿ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದರು.

ಬಜೆಟ್‌ನಲ್ಲಿ ಇದಕ್ಕೆ ಪ್ರಾವಿಷನ್ ಮಾಡಿದ್ದುದು ನನಗೆ ನೆನಪಿದೆ. ಆದರೆ ಸಹಕಾರಿ ಕ್ಷೇತ್ರದ್ದು ಎಷ್ಟು ಎಂದು ಕರಾರುವಕ್ಕಾಗಿ ಅವರಿಗೆ ಹೇಳುವುದಕ್ಕೆ ಆಗಲಿಲ್ಲ. ಏಕಂದರೆ ವಿ.ಪಿ. ಸಿಂಗ್‌ರವರು ಸರ್ಕಾರಕ್ಕೆ ಸಹಕಾರಿ ಕ್ಷೇತ್ರದ ವಿವರಗಳು ಆಗ ಸಿಕ್ಕಿರಲಿಲ್ಲ, ಈ ಸಂದರ್ಭದಲ್ಲಿ ನಾವು ಈ ವಿಚರವನ್ನು ಇಟ್ಟಿದ್ದೇವೆ. ಈ ಸಾಲ ಮನ್ನಾ ಮಾಡುವಂಥ ವಿಚಾರದಲ್ಲಿ ಈ ಕಾಲಕ್ಕೆ ಸಂಬಂಧಪಟ್ಟ ಹಾಗೆ ಕಟ್ ಆಫ್ ಡೇಟ್ ಎಲ್ಲಾ ಇದೆ. ನಾನು ವಿವರಗಳಿಗೆ ಹೋಗುವುದಿಲ್ಲ. 10 ಸಾವಿರದ ಒಳಗಡೆ ಇರುವಂಥ ಸಾಲ ಮನ್ನಾ ಆಗಬೇಕು ಎನ್ನುವ ವಿಚಾರದಲ್ಲಿ ಒಂದೇ ಅಭಿಪ್ರಾಯ ಒಂದೇ ನಿಲುವನ್ನು ನಾವೆಲ್ಲರೂ ಸೇರಿ ಇಟ್ಟುಕೊಂಡಿದ್ದೇವೆ. ಮೊನ್ನೆ ನಾವು ದೆಹಲಿಗೆ ಹೋದಾಗ ಪ್ರಧಾನಮಂತ್ರಿಗಳ ಮುಂದೆ, ಹಣಕಾಸಿನ ಸಚಿವರು ಮತ್ತು ಕೃಷಿ ಸಚಿವರ ಮುಂದೆ ಇದರ ಬಗ್ಗೆ ಮಾತನಾಡಿದ್ದೇವೆ. ಅವರ ಪರಿಸ್ಥಿತಿಯನ್ನು ಅವರು ವಿವರಿಸಿದ್ದಾರೆ, ನಮ್ಮ ಪರಿಸ್ಥಿತಿಯನ್ನು ನಾವು ವಿವರಿಸಿದ್ದೇವೆ. ಇದಕ್ಕೆ ಸಂಬಂಧಪಟ್ಟಹಾಗೆ ಪರಿಶೀಲಿಸುತ್ತೇವೆಂದು ಅವರು ಸ್ಪಷ್ಟವಾಗಿ ತಿಳಿಸಿದ್ದಾರೆ. ಈಗ ಮಾನ್ಯ ವಾಟಾಳ್‌ನಾಗರಾಜ್‌ರವರು ದೆಹಲಿಗೆ ಹೋಗಿಬಂದ ಮೇಲೆ ಇದರ ಬಗ್ಗೆ ರಾಜ್ಯ ಸರ್ಕಾರದ ನಿಲುವು ಏನೆಂದರೆ ಕೇಳುತ್ತಿದ್ದಾರೆ. ಈ ವಿಚಾರದಲ್ಲಿ ನಾನು ಈಗಾಗಲೇ ಹೇಳಿಕೆ ಕೊಟ್ಟಿದ್ದೇನೆ. ಈಗ ಪುನಃ ತಮ್ಮ ಎದುರಿಗೆ ಹೇಳುತ್ತಿದ್ದೇನೆ. ಕರ್ನಾಟಕ ರಾಜ್ಯದ ರೈತರ ಸಾಲ 10 ಸಾವಿರದ ಒಳಗೆ ಇರುವಂತಹದ್ದು ಏನಿದೆ. ಅದರ ಬಗ್ಗೆ ಕೇಂದ್ರಸರ್ಕಾರದ ಸ್ಕೀಮ್ ಏನು ಇದೆ, ಅದರಂತೆ ವಜಾ ಆಗಬೇಕು. ಎನ್ನುವಂಥದ್ದು ನಮ್ಮೆಲ್ಲರ ನಿಲುವು. ಈ ನಿಲುವಿನಲ್ಲಿ ನಾವು ಬದಲಾವಣೆ ಮಾಡುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದು ಆಟೋಮ್ಯಾಟಿಕಲಿ ಆಗುತ್ತದೆ.

ಶ್ರೀ ಎಸ್. ಬಂಗಾರಪ್ಪ : ಇದು ನಮ್ಮ ನಿಲುವು. ಈ ನಿಲುವನ್ನು ಜಾರಿಗೆ ಕೊಡಬೇಕೆಂದರೆ, ಕೆಲವು ಕಟ್ ಆಫ್ ಡೇಟ್ಸ್ ಆಣೆವಾರಿ ಇತ್ಯಾದಿ ವಿಚಾರಗಳೂ ಕೂಡ ಇದೆ. ಅವೊತ್ತು ನಾವು ನೀವು ಹೋದಾಗ ನಾವೆಲ್ಲರೂ ಸೇರಿ ಅವರಿಗೆ ಹೇಳಿ ಬಂದಿದ್ದೇವೆ. ಎಲ್ಲಾ ಪಕ್ಷದವರು ಸೇರಿಕೊಂಡು ಆ ದಿವಸ ಅವರಿಗೆ ಮನವರಿಗೆ ಮಾಡಿಕೊಡತಕ್ಕ ಪ್ರಯತ್ನ ಮಾಡಿದ್ದೇವೆ. ನಾವೆಲ್ಲರೂ ಸೇರಿ ಒಗ್ಗಟ್ಟಿನಿಂದ ರೈತರ ಪರವಾಗಿ ಅವರ ಮುಂದೆ ನಮ್ಮ ವಾದ ಇಟ್ಟಾಗ ಅವರು ಏನು ಹೇಳಿದ್ದಾರೆ, ಆ ವಿಚಾರವನ್ನು ನಾವು ಪರಿಶೀಲಿಸುತ್ತೇವೆನ್ನುವ ಮಾತನ್ನು ಹೇಳಿದ್ದಾರೆ. ಗೊಬ್ಬರದ ವಿಚಾರದಲ್ಲೂ ಕೂಡ ಅವರು ತಿಳಿಸಿದ್ದಾರೆ. ನಮ್ಮ ನಿಲುವು ಏನೆಂದರೆ, ಕೇಂದ್ರಸರ್ಕಾರದ ಬಳಿ ನಾವೆಲ್ಲಾ ಸರ್ವ ಪಕ್ಷ

ನಿಯೋಗ ಹೋಗಿಬಂದ ಮೇಲೆ ಅವರು ಏನೆಲ್ಲಾ ಹೇಳಿದ್ದಾರೆ ಅದಕ್ಕೆ ಏನು ಉತ್ತರ ಕೊಡುತ್ತಾರೆ ಅದರ ಮೇಲೆ ನಮ್ಮ ರಾಜ್ಯಸರ್ಕಾರದ ನಿಲುವು ಕೂಡ ನಿಂತಿರುತ್ತದೆ. ಅದಕ್ಕಾಗಿ ಅವರು ಏನ ಮಾಡುತ್ತಾರೆ ಎನ್ನತಕ್ಕದ್ದನ್ನು ನಾವೆಲ್ಲರೂ ಸ್ವಲ್ಪ ಕಾದು ನೋಡೋಣ. ಬರೀ ಕರ್ನಾಟಕ ಒಂದೇ ಅಲ್ಲ, ನಮ್ಮ ಇಡೀ ದೇಶದಲ್ಲಿರತಕ್ಕಂಥ ಎಲ್ಲಾ ರಾಜ್ಯಸರ್ಕಾರಗಳವರು ಇದೇ ರೀತಿ ಒತ್ತಡವನ್ನು ಕೇಂದ್ರದ ಮೇಲೆ ತಂದಿದ್ದಾರೆ ಎನ್ನತಕ್ಕ ವಿಚಾರ ನಮಗೂ ಕೂಡ ಗೊತ್ತಿದೆ. ಪಾರ್ಲಿಮೆಂಟಿನಲ್ಲಿ ಈ ವಿಚಾರ ಬಂದಾಗ ಕಟ್ ಮೋಷನ್ ನಾವು ಮೂವ್ ಮಾಡುತ್ತೇವೆಂದು ಬಿ.ಜೆ.ಪಿ. ನವರು ಹೇಳಿದ್ದನ್ನು ಶ್ರೀಮಾನ್ ಬೈರೇಗೌಡರು ಪ್ರಸ್ತಾಪ ಮಾಡಿದರು. ಅವರು ಏತಕ್ಕೆ ಮಾಡಿಲಿಲ್ಲ, ಬಿಡಲಿಲ್ಲ ಎನ್ನುವ ವಿಚಾರಕ್ಕೆ ನಾನು ಹೋಗುವುದಿಲ್ಲ. ನನಗೆ ನೆನಪು ಇರುವ ಹಾಗೆ ಅವರು ಅವೊತ್ತು ಸಭಾತ್ಯಾಗ ಮಾಡಿದರು.

ಶ್ರೀ ಸಿ. ಬೈರೇಗೌಡ : ಅಗ್ರಿಕಲ್ಚರ್ ಡಿಮ್ಯಾಂಡ್ ಬಂದಾಗ ಮಾಡಲಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಮಗೆ ಗೊತ್ತಿಲ್ಲದೇ ಏನು ಎನೋ ಮಾತನಾಡಬೇಡಿ. ಕೇಂದ್ರ ಸರ್ಕಾರದ ನೀತಿಯನ್ನು ಪ್ರತಿಭಟನೆ ಮಾಡಿ ಕಟ್ ಮೋಷನ್ ಮೂವ್ ಮಾಡಲಿಕ್ಕೆ ಬೇರೆ ಯಾವುದೇ ಪಕ್ಷ ಮುಂದೆ ಬಾರದೇ ಇದ್ದಾಗ ನಾವು ವಾಕ್ ಔಟ್ ಮಾಡಿದ್ದೇವೆ. ನಿನ್ನೆಯೂ ಸಹ ನಮ್ಮ ನ್ಯಾಷನಲ್ ಎಕ್ಸಿಕ್ಯುಟೀವ್ ಕಮಿಟಿ ಮಿಟಿಂಗ್‌ನಲ್ಲಿ ಈ ಸಬ್ಸಿಡಿ ಬಗ್ಗೆ ಮೊದಲು ಗೊಬ್ಬರದ ಬೆಲೆ ಯಾವ ರೀತಿ ಇತ್ತು. ಅದೇ ಬೆಲೆಯಲ್ಲಿ ವಿತರಣೆ ಆಗಬೇಕೆಂದು ಕೇಂದ್ರಸರ್ಕಾರಕ್ಕೆ ಒತ್ತಾಯ ತರುವಂಥ ತೀರ್ಮಾನ ಮಾಡಿದ್ದೇವೆ, ಆ ಬಗ್ಗೆ ತಾವು ಪತ್ರಿಕೆಯಲ್ಲಿ ಓದಿದ್ದೀರಿ.

ಶ್ರೀ ಎಸ್. ಬಂಗಾರಪ್ಪ : ಒಟ್ಟು ಅದು ಏನೇ ಇರಲಿ, ಕಟ್‌ಮೋಷನ್ ನನಗೆ ಗೊತ್ತಿರುವ ಹಾಗೆ ಪಾರ್ಲಿಮೆಂಟಿನಲ್ಲಿ ಮೂವ್ ಆಗಲಿಲ್ಲ, ಆ ವಿವರಗಳಿಗೆ ನಾನು ಈ ಸಂದರ್ಭದಲ್ಲಿ ಹೋಗುವುದಿಲ್ಲ, ಪಾರ್ಲಿಮೆಂಟಿನಲ್ಲಿ ಅದೇ ರೀತಿಯಾಗಿ ತಾವು ತಮ್ಮ ನ್ಯಾಷನಲ್ ಎಕ್ಸಿಕ್ಯುಟೀವ್ ಕಮಿಟಿ ಮಿಟಿಂಗ್‌ನಲ್ಲಿ ಬಿಜೆಪಿಯವರು ಸೇರಿದಾಗಲೂ ಏನಾಗಿದೆ ಎಂದು ಪತ್ರಿಕೆಯಲ್ಲಿ ನೋಡಿದೆ. ಎಲ್ಲೆಲ್ಲಿ ಬಿಜೆಪಿ ರೂಲ್ಸ್ ಸ್ಟೇಟ್ಸ್ ಇವೆ, ಅಲ್ಲೆಲ್ಲಾ ಲೋನ್ ವೇವಿಂಗ್ ಇಲ್ಲ ಅದು, ಫರ್ಟಿಲೈಸರ್ಸ್‌ಗೆ ಸಂಬಂಧಪಟ್ಟಂತೆ ಅದಕ್ಕೆ ನಾವು ಸಬ್ಸಿಡಿ ಕೊಡುತ್ತೇವೆ ಎನ್ನತಕ್ಕಂಥ ಮಾತಿನ ಬಗ್ಗೆ ಇವೊತ್ತು ಹೇಳಿರತಕ್ಕಂಥ ಕ್ಲಾರಿಫಿಕೇಷನ್ ಕೂಡ ಬಂದಿದೆ. ಅದು ಇಲ್ಲ ಎನ್ನತಕ್ಕದ್ದು ಕೂಡ ಬಂದಿದೆ. ಮಾನ್ಯ ವಿರೋಧಪಕ್ಷದ ಉಪನಾಯಕರು ಆ ವಿಚಾರದಲ್ಲಿ ತಿಳಿಸಿದ್ದೀರಿ. ಆದ್ದರಿಂದ, ನಾನು ಅದರ ಬಗ್ಗೆ ಹೆಚ್ಚು ಹೇಳಲಿಕ್ಕೆ ಹೋಗುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಪ್ರಸ್ತಾಪವಾಗಿರುವುದನ್ನು ಹೇಳಿದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ : ನಾವು ಪ್ರಸ್ತಾಪ ಮಾಡಿರುವ ಉದ್ದೇಶವಿಷ್ಟೆ, ಅರರು ಹೇಳಿದ ಹಾಗೆ ನೀವು ಹೇಳುತ್ತಾ ಹೋಗಬೇಡಿ ಖಚಿತವಾಗಿ ಏನಾದರೂ ಹೇಳಿ ಎಂದು.

ಶ್ರೀ ವಾಟಾಳ್ ನಾಗರಾಜ್ : ಈಗ ನಾವು ಕೇಳತಕ್ಕಂಥದ್ದು ನಮ್ಮ ಸರ್ಕಾರದ ನಿಲುವು ಏನು? ಸುಸ್ತಿ ಬಡ್ಡಿ ಕಡಿಮೆ ಮಾಡುತ್ತೀರಾ. ಬಡ್ಡಿ ಕಡಿಮೆ

ಮಾಡುತ್ತೀರಾ, ರೈತರಿತಗೆ ಏನಾದರೂ ಒಂದು ಅನುಕೂಲ ಮಾಡತಕ್ಕಂಥ ಒಂದು ಹೇಳಿಕೆಯನ್ನು ದಯಮಾಡಿ ಕೊಡಿ.

ಶ್ರೀ ಎಸ್. ಬಂಗಾರಪ್ಪ : ಆದ್ದರಿಂದ, ಇಲ್ಲಿ ಮತ್ತೊಂದು ವಿಚಾರ ಅಂದರೆ, ಅದರ ಅರ್ಥ. ನ್ಯಾಷನಲ್ ಎಕ್ಸಿಕ್ಯುಟೀವ್ ಕಮಿಟಿ ಆಫ್ ಬಿಜೆಪಿ, ಅವರೂ ಕೂಡ ಆ ವಿಚಾರದಲ್ಲಿ ಫರ್ಟಿಲೈಸರ್ ವಿಚಾರಕ್ಕೆ ಸೀಮಿತಗೊಳಿಸಿ ಹೇಳಿದರೆ ಅವರು ತೀರ್ಮಾನ ಮಾಡತಕ್ಕ ಸ್ಟೇಜಿನಲ್ಲಿ ಅವರು ಕೂಡ ಇಲ್ಲ, ಎನ್ನತಕ್ಕದ್ದು ತಿಳಿದುಬರುತ್ತದೆ, ಏಕೆಂದರೆ ಅವರ ಪಕ್ಷದ ಸರ್ಕಾರ ಕೂಡ ಮೂರ್ನಾಲ್ಕು ರಾಜ್ಯಗಳಲ್ಲಿವೆ. ಫರ್ಟಿಲೈಸರ್ಸ್‌ನ ಬಗ್ಗೆ ತೀರ್ಮಾನ ಮಾಡತಕ್ಕಂಥ ಪರಿಸ್ಥಿತಿಯಲ್ಲಿ ಇಲ್ಲ ಎನ್ನತಕ್ಕಂಥದ್ದು ಆಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವೂ ಸಹ ರಾಜ್ಯ ಸರ್ಕಾರ ನಡೆಸುತ್ತಿದ್ದೀರಿ. ಕೇಂದ್ರಸರ್ಕಾರ ಅಧಿಕಾರಕ್ಕೆ ಬಂದಂಥ ಸಂದರ್ಭದಲ್ಲಿ ನೂರು ದಿವಸದೊಳಗೆ ಹಿಂದಿನ ಅಂದರೆ 1990ರಲ್ಲಿ ಏನಿತ್ತು ಆ ಬೆಲೆ ಇಳಿಸುತ್ತೇವೆಂದು ಹೇಳಿದಂಥವರು ಮೊದಲೇ ರೈತರ ಮೇಲೆ ಪ್ರಹಾರ ಮಾಡುವ ರೀತಿಯಲ್ಲಿ ಗೊಬ್ಬರದ ಬೆಲೆಯನ್ನು ಈ ಮಟ್ಟಕ್ಕೆ ಏರಿಸಿದ್ದೀರಿ. ಕೇಂದ್ರಸರ್ಕಾರ ರೈತರ ವಿರೋಧಿ ನೀತಿ ಮಾಡಿದಂತಾಗುತ್ತದೆ. ಕೋಟ್ಯಾಂತರ ರೂಪಾಯಿ ದುಡ್ಡು ಪ್ರತಿಯೊಂದು ರಾಜ್ಯಗಳು 200-300 ಕೋಟಿ ರೂಪಾಯಿಗಳನ್ನು ತುಂಬಿಕೊಡಲಿಕ್ಕೆ ಯಾರಿಂದ ಸಾಧ್ಯವಿದೆ? ಇವೊತ್ತು ಕೇಂದ್ರಸರ್ಕಾರಕ್ಕೆ ಒತ್ತಡವನ್ನು ತರುತ್ತಿದ್ದೇವೆ. ಈ ಒಂದು ದ್ವಿಮುಖ ನೀತಿ ಸರಿಯಲ್ಲ, ರೈತರು ಹಾಳಾಗಿ ಹೋಗುತ್ತಿದ್ದಾರೆ, ಬಡ್ಜೆಟ್‌ಗೆ ಮುನ್ನ ಯಾವ ದರ ಇತ್ತು, ಅದೇ ದರ ಜಾರಿ ಮಾಡುವ ಬಗ್ಗೆ ಪ್ರೆಜರ್ ತರುವಂಥ ಪ್ರಯತ್ನ ರಾಜ್ಯಸರ್ಕಾರ ನಾವು ಮಾಡುತ್ತಿದ್ದೇವೆ. ನೀವೂ ಅದನ್ನೇ ಮಾಡಬೇಕು. ಇವೊತ್ತು ಕಾಂಗ್ರೆಸ್ ಸರ್ಕಾರ ಕೇಂದ್ರದಲ್ಲಿ ಏನಿದೆ, ಇದು ರೈತ ವಿರೋಧಿ ನೀತಿಯನ್ನು ಅನುಸರಿಸುತ್ತಿದೆ. ರೈತರಿಗೆ ಇದರಿಂದ ತೊಂದರೆಯಾಗುತ್ತಿದೆ. ಇದನ್ನು ನೀವು ಒಪ್ಪುತ್ತೀರಲ್ಲವೇ?

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಈ ಸಂದರ್ಭದಲ್ಲಿ ಯಾವುದೇ ಪಕ್ಷದ ಸರ್ಕಾರ ಇದ್ದರೂ ಕೂಡ ಅದು ಸಬ್ಸಿಡಿ ವಿಚಾರ ಇರಬಹುದು ಅಥವಾ ಮತ್ತೊಂದು ವಿಚಾರ ಇರಬಹುದು, ಅದು ಅಲ್ಲಿನ ಆರ್ಥಿಕ ಪರಿಸ್ಥಿತಿಯನ್ನು ನೋಡಿಕೊಂಡು ಅದರ ಹಿನ್ನೆಲೆಯಲ್ಲಿ ತೀರ್ಮಾನ ಮಾಡಿಕೊಳ್ಳುತ್ತಾರೆ. ಇರತಕ್ಕ ಪರಿಸ್ಥಿತಿಯನ್ನು ವಿಶ್ಲೇಷಣೆಯಿಂದ ಹೇಳುವುದಾದರೆ ವಾಸ್ತವಾಂಶ ವಿಚಾರ ಇದು. ನಾವು ರೈತರ ವಿರುದ್ಧವಾಗಿದ್ದೇವೆ ಎನ್ನತಕ್ಕ ಪ್ರಶ್ನೆ ಇದಲ್ಲ, ನಾವು ವಿಚಾರ ಮಾಡಬೇಕು. ಇವತ್ತು ಫರ್ಟಿಲೈಸರ್ ವಿಚಾರದಲ್ಲಿ ನೂರಾರು ಕೋಟಿ ರೂ. ಕೊಡುವುದಕ್ಕೆ ಹೇಗೆ ಸಾಧ್ಯವಿದೆ, ಇದು ಅಷ್ಟು ಸುಲಭ ಅಲ್ಲ ಎನ್ನತಕ್ಕ ಅಭಿಪ್ರಾಯವನ್ನು ಈಗತಾನೆ ತಾವು ಹೇಳಿದಿರಿ. Samething is applicable to the loan waiving scheme also.

ಈ ಸಾಲ ಮನ್ನಾ ಮಾಡತಕ್ಕ ವಿಚಾರದಲ್ಲಿ ಕೂಡ ಇದೇ ರೀತಿಯ ಒತ್ತಡ ಆಯಾಯ ರಾಜ್ಯಸರ್ಕಾರಗಳ ಆರ್ಥಿಕ ಪರಿಸ್ಥಿತಿಯ ಮೇಲೆ ಸಹಜವಾತಗಿಯೇ ಒತ್ತಡ ಬಿದ್ದೇ ಬೀಳುತ್ತದೆಂಬುದು ಇವತ್ತಿನ ಫರ್ಟಿಲೈಸರ್ ವಿಚಾರದಲ್ಲಿ ಹೇಗೋ ಅದೇ ರೀತಿ ಸಾಲ ಮನ್ನಾ ವಿಚಾರದಲ್ಲಿ ಕೂಡ ಬರುತ್ತದೆ. ಇದನ್ನು ನಾವು ಮನಗಾಣಬೇಕು. ಮಧ್ಯ ಪ್ರದೇಶ ಸರ್ಕಾರದ ವಿಚಾರವನ್ನು ತಾವು ಹೇಳಿದ್ದೀರಿ.

ಆದು ಇರಲಿ. ನೀವು ಹೇಳಿದ ರೀತಿಯಲ್ಲಿ ಇದನ್ನು ಮಧ್ಯಪ್ರದೇಶ ಸರ್ಕಾರ ಎಂತಲೇ ನಾವು ಸೀಮಿತವಾಗಿ ಇಟ್ಟುಕೊಳ್ಳೋಣ ಆವತ್ತು ಪ್ರೊ : ನಂಜುಂಡಸ್ವಾಮಿಯವರು, ನಾನೇ ಅಲ್ಲಿಗೆ ಹೋಗಿದ್ದೆ, ಆದರೆ...

ಶ್ರೀ ಬಿ.ಎಸ್. ಯಡಿಯೂರಪ್ಪ : ನಂಜುಂಡಸ್ವಾಮಿಯವರ ಹೆಸರು ಏತಕ್ಕೆ ಹೇಳುತ್ತೀರಿ? ನೀವು ಇದನ್ನು ಅಧಿಕೃತವಾಗಿ ಮಾಡಿಲ್ಲ ಎಂದು ಹೇಳಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ತಮ್ಮ ಸರ್ಕಾರ ಅಲ್ಲಿಯ ಮುಖ್ಯ ಮಂತ್ರಿಗಳ ಜೊತೆ...

ಶ್ರೀ ಎಸ್. ಬಂಗಾರಪ್ಪ : ಅವರು ಹೇಳಿದ್ದು, ನಾನು ಅಲ್ಲಿಗೆ ಹೋಗಿದ್ದೆ. ಅಲ್ಲಿ ಯಾವುದೇ ಸ್ಕೀಂನ್ನೂ ಮಾಡಿಲ್ಲ, ಈ ಬಗ್ಗೆ ಸರ್ಕಾರೀ ಆಜ್ಞೆಯೂ ಇಲ್ಲ ಎಂದು ಹೇಳಿದ್ದಾರೆ. ಮಾಡಿದ್ದೇವೆ ಎಂದು ನೀವು ಹೇಳಿದ ತಕ್ಷಣ ಅದನ್ನು ತರಿಸಿಕೊಳ್ಳಬೇಕೆಂದು ಅಲ್ಲ ಒಂದು ವೇಳೆ ಮಧ್ಯ ಪ್ರದೇಶ ಸರ್ಕಾರದವರು ಸಾಲ ಮನ್ನಾಕ್ಕೆ ಸಂಬಂಧಪಟ್ಟಂತೆ ಹಣವನ್ನು ಅಲ್ಲಿಯ ರೈತರ ಪರವಾಗಿ ತುಂಬಿಕೊಳ್ಳುವಂಥ ಕೆಲಸವನ್ನು ಮಾಡುವಂತಹ ಸರ್ಕಾರೀ ಆಜ್ಞೆಯನ್ನೇನಾದರೂ ಮಾಡಿದ್ದರೆ...

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವು ಮಾಡಿದ್ದೀರಾ ಹೇಳಿ?

ಶ್ರೀ ಎಸ್. ಬಂಗಾರಪ್ಪ : ಇದು ಪರೀಕ್ಷೆಯಲ್ಲಿ ಫಿಲಪ್ ದಿ ಬ್ಲ್ಯಾಂಕ್ಸ್ ಎಂದು ಇರುವುದನ್ನು ಫಿಲಪ್ ಮಾಡುವಂತೆ ಅಲ್ಲ. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಒಂದು ತಿಳಿದುಕೊಳ್ಳಬೇಕು. ಒಂದು ವೇಳೆ ಆ ಆರ್ಡರ್ ಕಾಪಿ ಏನಾದರೂ ಇದ್ದಿದ್ದರೆ ಮಾನ್ಯ ಯಡಿಯೂರಪ್ಪನವರು ಅದನ್ನು ಕೈಯಲ್ಲಿ ಹಿಡಿದುಕೊಂಡು ಕೈಯನ್ನು ಮೇಲಕ್ಕೆತ್ತಿ ಎಲ್ಲರಿಗೂ ತೋರಿಸುತ್ತಿದ್ದರು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನನ್ನ ವಿನಂತಿ. ಮುಖ್ಯ ಮಂತ್ರಿಗಳಾಗಿ ತಾವು ಈ ಮಾತನ್ನು ಹೇಳಬಾರದು ಏಕೆಂದರೆ ಇದು ರೆಕಾರ್ಡ್‌ಗೆ ಹೋಗುತ್ತಿದೆ.

ಶ್ರೀ ಎಸ್. ಬಂಗಾರಪ್ಪ : ಇದು ಹೋಗಬೇಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮುಖ್ಯಮಂತ್ರಿಗಳಾಗಿ ಅಧಿಕೃತವಾಗಿ ಈಗಲೇ ಮಧ್ಯಪ್ರದೇಶ ಸರ್ಕಾರದ ಚೀಫ್ ಸೆಕ್ರೆಟರಿಯವರನ್ನು ಕಾಂಟ್ಯಾಕ್ಟ್ ಮಾಡಿ. ಆದರೆ ತಾವು ಮುಖ್ಯ ಮಂತ್ರಿಗಳಾಗಿ ಹೀತಗೆ ಹೇಳಬಾರದು. ಒಂದು ಸರ್ಕಾರದ ಬಗ್ಗೆ...

ಶ್ರೀ ಎಸ್. ಬಂಗಾರಪ್ಪ : ನೀವು ಈ ರೀತಿ ಮಧ್ಯೆ ಮಧ್ಯೆ ಎದ್ದು ಉದ್ದುದ್ದದ ಭಾಷಣ ಮಾಡಿದರೆ ಹೇಗಾಗುತ್ತದೆ. ನೀವು ಮಾತನಾಡಬಾರದೆಂದು ನಾನು ಹೇಳುತ್ತಿಲ್ಲ, ಈಗ ನನಗೆ ತಿಳಿದಿರುವಂತೆ ಮಧ್ಯಪ್ರದೇಶ ಸರ್ಕಾರದವರು ಈ ರೀತಿ ಯಾವ ಯಾವುದೇ ಆರ್ಡರನ್ನೂ ಮಾಡಿಲ್ಲ. ಒಂದುವೇಳೆ ಹಾಗೆ ಏನಾದರೂ ಮಾಡಿದ್ದರೆ ಅದನ್ನು ಒಪ್ಪಿಕೊಳ್ಳೋಣ. ಅದನ್ನು ಪರಿಶೀಲನೆ ಮಾಡೋಣ, ಯಾವರೀತಿ ಆರ್ಡರ್ ಆಗಿದೆ ಎಂಬುದನ್ನು ನೋಡೋಣ. ನಿಮ್ಮ ಪಕ್ಷದ ಸರ್ಕಾರ ಒಂದುವೇಳೆ ಈರೀತಿ ಮಾಡಿದ್ದರೆ ಆ ಸರ್ಕಾರೀ ಆಜ್ಞೆಯ ಒಂದು ನಕಲನ್ನು ನಮ್ಮ ರಾಜ್ಯಸರ್ಕಾರಕ್ಕೆ ಕಳುಹಿಸಿಕೊಡಿ. ನೀವು ಹೇಳಿದ ತಕ್ಷಣ ಆರ್ಡರ್ ಕಾಪಿ ಅಲ್ಲಿ ಉದ್ಭವವಾಗಿ ಬರುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಇಲ್ಲ, ಇಲ್ಲ, ದಯವಿಟ್ಟು ಕ್ಷಮಿಸಿ. ನೀವು ಮಧ್ಯಪ್ರದೇಶ ಸರ್ಕಾರದ ಚೀಫ್ ಸೆಕ್ರೆಟರಿಯವರನ್ನು ಕಾಂಟ್ಯಾಕ್ಟ್ ಮಾಡಿ ಅದರ ನಕಲನ್ನು ತರಿಸಿಕೊಳ್ಳುವುದಕ್ಕಾಗುವುದಿಲ್ಲವೇ?

ಶ್ರೀ ಎಸ್. ಬಂಗಾರಪ್ಪ : ಕಳೆದಸಾರಿಯ ಅಧಿವೇಶನದಲ್ಲಿ ನೀವು ಹೇಳಿದ್ದೀರಿ. ಹಾಗೇನಾದರೂ ಇದ್ದಿದ್ದರೆ ನಿಮ್ಮ ಹತ್ತಿರ ಕೈ ಚಾಚಿ...

ಶ್ರೀ ಬಿ.ಎಸ್. ಯಡಿಯೂರಪ್ಪ : ಸ್ವಾಮಿ, ನಾನು ಆ ಸರ್ಕಾರೀ ಆಜ್ಞೆಯನ್ನು ಓದಿದ್ದೇನೆ. ನಮ್ಮ ಸ್ಕೀಂನ್ನು ಯಾವರೀತಿ ಇಂಪ್ಲಿಮೆಂಟ್ ಮಾಡಿದ್ದೇವೆ ಎಂಬ ಬಗ್ಗೆ ವಿವರಣೆಯನ್ನೂ ನಾನು ತಮಗೆ ಹೇಳಿದ್ದೇನೆ.

SRI S. BANGARAPPA : Hon. Member cannot put the entire blame on the State Government. I know that the Madhya Pradesh State Government has not passed this order. If you have got a copy of that order, please produce it.

SRI B.S YEDIYURAPPA : If they have implemented, will you implement?

SRI S. BANGARAPPA : As far as I know, they have not passed any order. If they have passed it you send a copy to me. ಮಾನ್ಯ ಅಧ್ಯಕ್ಷರೇ, ನಾನು ಹೇಳಿದ್ದೇನೆ. ನನಗೆ ಬಂದಿರತಕ್ಕ ವರದಿಯ ಪ್ರಕಾರ ಮಧ್ಯಪ್ರದೇಶ ಸರ್ಕಾರದವರು ಯಾವ ಆರ್ಡರನ್ನೂ ಕೂಡ ಮಾಡಿಲ್ಲ, ಹಾಗೆ ಮಾಡಿದ್ದರೆ ಅದರ ಒಂದು ಕಾಪಿಯನ್ನು ಕಳುಹಿಸಿಕೊಡಲಿ. ನಾವು ಅದನ್ನು ನೋಡುತ್ತೇವೆ. ಪರಿಶೀಲಿಸುತ್ತೇವೆ, ಇದು ಬಹಳ ಮುಖ್ಯವಾದ ವಿಚಾರ ಎಂದು ಕಂಡುಬಂದರೆ ಅದನ್ನು ಪರಿಶೀಲನೆ ಮಾಡೋಣ. ತಾವು ಹಿಂದಿನ ಅಧಿವೇಶನದಿಂದ ಹೇಳುತ್ತಿದ್ದೀರಿ. ಚುನಾವಣೆಯಾದಾಗಾಲಾಯಿತು, ಈ ಸ್ಕೀಂ ಬಂದಾಗಲಾಯ್ತು ನೀವು ಹೇಳುತ್ತಿದ್ದೀರಿ, ಮಧ್ಯಪ್ರದೇಶ ಸರ್ಕಾರದವರು ಮಾಡಿದ್ದಾರೆ, ಮಾಡಿದ್ದಾರೆಂದು ಹೇಳುತ್ತಿದ್ದೀರಿ. ಆದರೆ ನಿಮ್ಮ ಹತ್ತಿರ ಒಂದು ಆರ್ಡರ್ ಕಾಪಿ ಇಲ್ಲ, ನನಗೆ ಗೊತ್ತಿರುವಂತೆ ಅವರು ಆರ್ಡರ್ ಮಾಡಿಲ್ಲ, ಮಾನ್ಯ ವಾಟಾಳ್ ನಾಗರಾಜ್‌ರವರ ಗಮನಕ್ಕೆ ಒಂದು ಮಾತನ್ನು ತರುತ್ತಿದ್ದೇನೆ. ಏನೆಂದರೆ, ಮಧ್ಯಪ್ರದೇಶ ಸರ್ಕಾರ ಈರೀತಿ ಆರ್ಡರ್ ಮಾಡಿಲ್ಲ. ಮಾಡಿದ್ದರೆ ತಾವು ದಯವಿಟ್ಟು ಒಂದು ಕಾಪಿಯನ್ನು ಕಳುಹಿಸಿಕೊಡಿ.

ಇನ್ನು ಉತ್ತರ ಪ್ರದೇಶ ರಾಜ್ಯದಲ್ಲಿಯೂ ಕೂಡ ತಮ್ಮ ಸರ್ಕಾರ ಇದೆ. ಇತ್ತೀಚೆಗೆ ಚುನಾವಣೆ ಆದಮೇಲೆ ಆಗಿರತಕ್ಕದ್ದು. ಶ್ರೀಮಾನ್ ಕಲ್ಯಾಣ ಸಿಂಗ್ ದೇವರು ಅಲ್ಲ ಮುಖ್ಯಮಂತ್ರಿಯಾಗಿದ್ದಾರೆ. ಒಂದು ವೇಳೆ ಮಧ್ಯಪ್ರದೇಶ ಸರ್ಕಾರದವರು ಈ ರೀತಿ ಮಾಡಿದ್ದರೆ ನಾನು ಮಾನ್ಯ ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತೇನೆ. ನಿಮ್ಮ ಪಕ್ಷದ ನೀತಿ ಆರೀತಿ ಆಗಿದ್ದರೆ ಹೊಸದಾಗಿ ಉತ್ತರ ಪ್ರದೇಶದಲ್ಲಿ ಏನು ಸರ್ಕಾರ ಬಂದಿದೆ, ಅಲ್ಲಿ ಏತಕ್ಕೆ ಇದನ್ನು ಇಂಪ್ಲಿಮೆಂಟ್ ಮಾಡಿಲ್ಲ ಎನ್ನತಕ್ಕ ಪ್ರಶ್ನೆಯನ್ನು ನಾನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಕೇಳುತ್ತೇನೆ. ಆದರೆ ನಿಮ್ಮಿಂದ ನಾನು ಉತ್ತರವನ್ನು ಬಯಸುವುದಿಲ್ಲ, ಈ ಪ್ರಶ್ನೆಯನ್ನು ಕೇಳಿ ಇದನ್ನು ಇಲ್ಲಿಗೇ ಬಿಡುತ್ತೇನೆ.

11.35 ಎ.ಎಂ

ಏತಕ್ಕೆಂದರೆ ರೈತರ ಬಗ್ಗೆ ಶ್ರೀಮಾನ್ ಟಿಕಾಯತ್ ಇರತಕ್ಕಂಥ ಜಾಗ ಅದು. ರೈತರ ಮುಖಂಡರೆಂದೆನಿಸಿಕೊಂಡ ಶ್ರೀಮಾನ್ ಟಿಕಾಯಿತ್ ಅವರು ಬಹಳ ದೊಡ್ಡ ರೈತರ ಚಳುವಳಿ ನಡೆಸಿದ ಉತ್ತರ ಪ್ರದೇಶ. ಕಾಂಗ್ರೆಸ್‌ನ್ನು ಸೋಲಿಸುವುದಕ್ಕೆ ಅವರೆಲ್ಲರೂ ಕೆಲಸ ಮಾಡಿದ್ದಾರೆ. ಈಗ ಅದೇ ರೈತರ ಮುಖಂಡರಿದ್ದಾರೆ, ರೈತರಿದ್ದಾರೆ. ಈಗ ರೈತರ ಪರವಾಗಿ ನೀವು ಹೋರಾಟ ಮಾಡುತ್ತಿದ್ದೇವೆಂದು ಅಂದುಕೊಂಡಿದ್ದರೆ ಅಲ್ಲಿಯ ಜನ, ನಿಮ್ಮ ಸರ್ಕಾರ ಇದೆ, ದೊಡ್ಡ ದೊಡ್ಡ ರ್ಯಾಲಿ ಆಗಿದೆ. ನಿಮ್ಮ ಸರ್ಕಾರ ಇದ್ದವರು ಇಂಪ್ಲಿಮೆಂಟ್ ಮಾಡಬೇಕಾಗಿತ್ತು. ನನಗೆ ಗೊತ್ತಿರುವಹಾಗೆ ಈ ವಿಚಾರಕ್ಕೆ ಬಂದಾಗ.....

ಶ್ರೀ ಬಿ.ಎಸ್. ಯಡಿಯೂರಪ : ವಿ.ಪಿ. ಸಿಂಗ್ ಸರ್ಕಾರ ರೈತರ ಸಾಲ ಮನ್ನಾ ಮಾಡುತ್ತೇವೆಂದು ಹೇಳಿ ರೈತರನ್ನು ಬೀದಿ ಪಾಲು ಮಾಡಿದರು.

(ಗೊಂದಲ)

MR. SPEAKER : He has not yielded.

(Interruptions)

MR. SPEAKER : Nothing shall go on record . ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮಾತ್ರ ಅವಕಾಶ ಕೊಟ್ಟಿದ್ದೇನೆ. ಅವರು ಏನು ಹೇಳುತ್ತಾರೆಯೋ ಅದು ಮಾತ್ರ ಕಡತಕ್ಕೆ ಹೋಗುತ್ತದೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ನಾನು ಈ ಸದನದ ಗಮನಕ್ಕೆ ಸರ್ಕಾರದ ಪರವಾಗಿ ತರತಕ್ಕಂಥದ್ದು ಇಷ್ಟೇನೆ.

(ಗೊಂದಲ)

ಅಧ್ಯಕ್ಷರು : ಈಗ ಮಾನ್ಯ ನಾಯಕ್‌ರವರು ಎದ್ದು ನಿಂತಿದ್ದಾರೆ, ಅವರಿಗೆ ಮಾತನಾಡಲು ಅವಕಾಶ ಕೊಡಿ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೇ, ನಮ್ಮ ನಾಯಕರು ಎದ್ದುಬಿಟ್ಟರೆ ಬಹಳ ಕಷ್ಟವಾಗುತ್ತದೆ.

ಶ್ರೀ ಎನ್.ಜಿ. ನಾಯಕ್ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಯಡಿಯೂರಪ್ಪನವರು ಒಬ್ಬರೇ ಅಲ್ಲ ರೈತರು, ನಾವೊ ರೈತರಿದ್ದೇವೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೇ, ಮುಂದಿನ ವಿಧಾನ ಸಭೆ ಅಧಿವೇನಕ್ಕೆ ಮಧ್ಯಪ್ರದೇಶದ ಸರ್ಕಾರ ಏನು ಗವರ್ನಮೆಂಟ್ ಆರ್ಡರ್ ಸಾಲ ಮನ್ನಾ ಬಗ್ಗೆ ಮಾಡಿದೆ ಅದನ್ನು ತೆಗೆದುಕೊಂಡು ಬರುತ್ತೇನೆ. ಆವಾಗ ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಸಾಲ ಮನ್ನಾ ಮಾಡುತ್ತಾರೆಯೇ ಇಲ್ಲವೆಂದರೆ ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುತ್ತಾರೆಯೇ ಎಂದು ಕೇಳುವುದಕ್ಕೆ ನಾನು ಇಚ್ಚಿಪಡುತ್ತೇನೆ. ಮಧ್ಯ ಪ್ರದೇಶದ ಸರ್ಕಾರದ ಆರ್ಡರನ್ನು ನಾವು ತೆಗೆದುಕೊಂಡು ಬರುತ್ತೇವೆ.

(ಗೊಂದಲ)

ಅಧ್ಯಕ್ಷರು : ಆಗ ಮಾನ್ಯ ಯಡಿಯೂರಪ್ಪನವರೇ ನಿಮ್ಮ ಪಕ್ಷದ ನಾಲ್ಕೂ ಜನ ಮಾನ್ಯ ಸದಸ್ಯರು ಒಟ್ಟಿಗೆ ಎದ್ದು ನಿಂತು ಮಾತನಾಡಿದಾಗ ಆಡಳಿತ ಪಕ್ಷದ 180 ಜನ ಒಟ್ಟಿಗೆ ಎದ್ದುನಿಂತು ಮಾತನಾಡುವುದಕ್ಕೆ ಶುರುಮಾಡಿದರೆ ಏನಾಗುತ್ತದೆ? ಈಗ ಮಾನ್ಯ ಮುಖ್ಯಮಂತ್ರಿಗಳು ನೀವು ಹೇಳಿದ್ದನ್ನು ಕೇಳಿದ್ದಾರೆ ಈಗ ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಅದನ್ನು ಕೇಳುವುದಕ್ಕೆ ಅವಕಾಶ ಮಾಡಿಕೊಡಿ. ನಿಮ್ಮ ಮಧ್ಯಪ್ರದೇಶದ ಸರ್ಕಾರ ಮಾಡಿರುವ ಆದೇಶವನ್ನು ತಂದುಕೊಟ್ಟರೆ ವಿಚಾರ ಮಾಡುತ್ತೇವೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ ನಾನು ಇಷ್ಟೇ ಮಾತನಾಡುವುದು. ಮಧ್ಯಪ್ರದೇಶದಲ್ಲಿ ಇಂಪ್ಲಿಮೆಂಟ್ ಮಾಡಿದ್ದಾರೆ. ಅದನ್ನು ಇಲ್ಲಿ ಜಾರಿಗೆ ತರಲಿ. ಅಷ್ಟೇ ಇನ್ನೇನು ಹೇಳುವುದಿಲ್ಲ. ಮಧ್ಯಪ್ರದೇಶದಲ್ಲಿ ಇಂಪ್ಲಿಮೆಂಟ್ ಮಾಡದಿದ್ದರೆ ನಾವು ನಾಲ್ಕೂ ಜನ ನಮ್ಮ ನಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಮನೆಗೆ ಹೋಗುತ್ತೇವೆ. ಇಲ್ಲದಿದ್ದರೆ ನೀವು ರಾಜೀನಾಮೆ ಕೊಟ್ಟು ಹೋಗುತ್ತೀರಾ?

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಮಧ್ಯಪ್ರದೇಶದಲ್ಲಿ ಒಂದು ವೇಳೆ ಈ ರೀತಿಯಾಗಿ ಇಂಪ್ಲಿಮೆಂಟ್ ಮಾಡಿದ್ದರೆ ನನ್ನ ಸ್ಥಾನಕ್ಕೆ ರಾಜೀನಾಮೆ ಕೊಡಬೇಕೆಂದು ಮಾನ್ಯ ಯಡಿಯೂರಪ್ಪನವರು ಕೇಳಿದ್ದಾರೆ. ಮಾಡದಿದ್ದರೆ ಬಿಜೆಪಿ.ಯ 4 ಜನ ಮಾನ್ಯ ಸದಸ್ಯರು ರಾಜೀನಾಮೆ ಕೊಡುತ್ತೇವೆಂದು ಹೇಳಿದ್ದಾರೆ. ಅದಕ್ಕೆ ಒಂದು ಕೆಲಸ ಮಾಡಿ. ಇದು ನಿಮ್ಮ ಪಕ್ಷದ ನೀತಿ ತಾನೆ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಲ.

(ಗೊಂದಲ)

ಅಧ್ಯಕ್ಷರು : ಆರ್ಡರ್, ಆರ್ಡರ್

ಶ್ರೀ ಎಸ್. ಬಂಗಾರಪ್ಪ : ಸ್ವಲ್ಪ ತಾಳಿ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಿಮ್ಮ ಮಧ್ಯಪ್ರದೇಶದಲ್ಲಿ ಈ ರೀತಿ ಜಾರಿಗೆ ಕೊಟ್ಟಿಲ್ಲವೆಂದು ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಹಾಗೇನಾದರೂ ಇದ್ದರೆ ಆರ್ಡರ್ ಕಾಪಿಯನ್ನು ಕಳುಹಿಸಿಕೊಡಿ. ಅದನ್ನು ಪರಿಶೀಲಿಸಿ ಏನು ಮಾಡಬೇಕೆಂದು ಹೇಳುತ್ತೇನೆಂದು ಕೂಡ ಹೇಳಿದ್ದೇನೆ. ಅವತ್ತಿನಿಂದಲೂ ಈ ಮಾತನ್ನು ಹೇಳುತ್ತಿದ್ದೇನೆ. ಇನ್ನೂ ಅದನ್ನು ಕಳುಹಿಸಿಕೊಡುವುದಕ್ಕೆ ನಿಮ್ಮಿಂದ ಆಗಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನೀವೇ ತರಿಸಿಕೊಳ್ಳಿ.

ಶ್ರೀ ಎಸ್. ಬಂಗಾರಪ್ಪ : ತರಿಸಿಕೊಳುವುದು ಏನು ಬಂತು? ಮಧ್ಯ ಪ್ರದೇಶದ ಸರ್ಕಾರದವರು ಮಾಡಿಲ್ಲವೆಂದು ಹೇಳಿದ್ದಾರೆ. ಆ ರೀತಿ ಮಾಡಿಲ್ಲವೆಂದು ಹೇಳಿರುವ ವರದಿ ನನ್ನ ಹತ್ತಿರ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಸರಿಯಲ್ಲ ಅದು.

ಶ್ರೀ ಎಸ್. ಬಂಗಾರಪ್ಪ : ಮತ್ತೂ ಸರಿಯಲ್ಲವೆಂದರೆ ಏನು? ಮಧ್ಯ ಪ್ರದೇಶದ ಸರ್ಕಾರದವರು ಈ ರೀತಿ ಮಾಡಿಲ್ಲ

SRI B.S. YEDIYURAPPA : No. That is not correct.

SRI S. BANGARAPPA : You may say so many things. I have been telling that Madhya Pradesh Government have not issued such an order in respect of loan waiver scheme.

ಶ್ರೀ ಬಿ.ಎಸ್. ಯಡಿಯೂರಪ್ಪ : ಅದಕ್ಕೆ ನಾನು ಒಂದು ಸಲಹೆ ಕೊಟ್ಟೆ. ನಮ್ಮ ಛಾಲೆಂಜ್ ಅನ್ನು ನೀವು ಅಕ್ಸಪ್ಟ್ ಮಾಡಿಕೊಳ್ಳಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ : ನಾನು ಪದೇ ಪದೇ ಹೇಳುವುದಕ್ಕೆ ಹೋಗುವುದಿಲ್ಲ. ಒಂದು ವೇಳೆ ಹಾಗೇನಾದರೂ ಇದ್ದರೆ ಆ ಆರ್ಡರ್ ಕಾಪಿ ಕಳುಹಿಸಿಕೊಡಿ ಎಂದು ಹೇಳಿದ್ದೇನೆ. ನಾವು ಅದನ್ನು ನೋಡಿ ಯಾವ ರೀತಿ ಮಾಡಬೇಕೆಂದು ವಿಚಾರ ಮಾಡಿ ಹೇಳುತ್ತೇನೆಂದು ಹೇಳಿದ್ದೇನೆ. ನಿಮ್ಮ ಪಕ್ಷದ ಸರ್ಕಾರಗಳು ಏನ ಹಿಮಾಚಲ ಪ್ರದೇಶ, ರಾಜಾಸ್ಥಾನ, ಉತ್ತರ ಪ್ರದೇಶದಲ್ಲಿ ಇವೆ, ಅಲ್ಲೆಲ್ಲಾ ಇದನ್ನು ಇಂಪ್ಲಿಮೆಂಟ್ ಮಾಡಿಸಿ, ಆಮೇಲೆ ರಾಜೀನಾಮೆ ಕೊಡುವ ವಿಚಾರವನ್ನು ಗಮನದಲ್ಲಿಟ್ಟು ಕೊಂಡು ಈ ಸವಾಲನ್ನು ಎಸೆಯಿರಿ. ಆ ತರುವಾಯ ನಾನು ಅಧ್ಯಕ್ಷರ ಮೂಲಕ ಉತ್ತರ ಕೊಡುವ ಪ್ರಯತ್ನ ಮಾಡುತ್ತೇನೆ. ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುವುದು ಇಷ್ಟೆ. ಶ್ರೀ ವಿ.ಪಿ. ಸಿಂಗ್‌ರವರ ಕಾಲದಲ್ಲಿ ತಯಾರಿಸಿರತಕ್ಕ ಸಾಲ ಮನ್ನಾ ಯೋಜನೆ ಏನಿದೆ, ಈ ವಿಚಾರದಲ್ಲಿ ನಾವು ಅದನ್ನು ಒಪ್ಪಿಕೊಂಡಿದ್ದೇವೆ. ಬೇರೆ ರಾಜ್ಯಗಳ ಸರ್ಕಾರಗಳು ಆ ಸ್ಕೀಮನ್ನು ಏವಾಲ್ಟ್ ಮಾಡಿ ಕಳುಹಿಸಿರುವುದು. ಅವರ ಕಾಲದಲ್ಲಿ ಅಷ್ಟಾದರೂ ಮಾಡಿದರು. ಆಮೇಲೆ ಅದರ ಬಗ್ಗೆ ಅನೇಕ ಎಡರುತೊಡರುಗಳು ಏರುಪೇರುಗಳು ಬೇಕಾದಷ್ಟು ಬಂದಿವೆ. ನಾನು ಇಲ್ಲವೆಂದು ಹೇಳುವುದಿಲ್ಲ. ಅದರಲ್ಲಿ ಕೆಲವು ಕಂಡೀಷನ್ಸ್ ಇರುವುದು ಒಳ್ಳೆಯದಲ್ಲವೆಂದು ನಮ್ಮ ಮತ್ತು ನಿಮ್ಮ ಅಭಿಪ್ರಾಯ ಇದೆ. ಆ ಕಂಡೀಷನ್‌ಗಳನ್ನು ತೆಗೆಯದಿದ್ದರೆ ಅನೇಕ ಜನರಿಗೆ ಉಪಯೋಗವಾಗುವುದಿಲ್ಲ. ಈ ವಿಚಾರವನ್ನು ಎಲ್ಲರೂ ಕೇಂದ್ರಕ್ಕೆ ಸೇರಿ ಹೋಗಿ ಹೇಳಿಬಂದಿದ್ದೇವೆ. ಅವರು ಪರಿಶೀಲಿಸುತ್ತೇವೆಂದು ಹೇಳಿದ್ದಾರೆ. ಇನ್ನು ಇದಕ್ಕಿಂತ ಹೆಚ್ಚಿಗೆ ಹೇಳುವುದಕ್ಕೆ ಬರುವುದಿಲ್ಲ. ಈಗ ನೀವು ಕೇಳುವುದು ಏನು? ಇದರ ಆರ್ಥಿಕ ವಿಚಾರವನ್ನು ಗಮನದಲ್ಲಿಟ್ಟುಕೊಂಡು ನೀವೇ ಏನಾದರೂ ರೈತರ ಪರವಾಗಿ ಮಾಡಿ ಎಂದು ಹೇಳುತ್ತಿದ್ದೀರಿ. ಆ ರೀತಿ ಕೇಳುವುದು ಬೇಡವೆಂದು ಅಲ್ಲ. ಈ ವಿಚಾರದಲ್ಲಿ ಕೇಂದ್ರದವರು ಏನು ಮಾಡುತ್ತಾರೆಂದು ನೋಡಿಕೊಂಡು ಮತ್ತು ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಅದರ ಬಗ್ಗೆ ತೀರ್ಮಾನ ಮಾಡೋಣ. ಇನ್ನು ಇಷ್ಟು ವಿಚಾರವನ್ನು ನಾನು ಈ ಸಂದರ್ಭದಲ್ಲಿ ತಿಳಿಸಿ ಇನ್ನು ಉಳಿದಿರತಕ್ಕ ಹೇಳಿಕೆ ಕೊಡುವುದು ಇದಕ್ಕೇನೂ ಇಲ್ಲ ಎಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಬಡ್ಡಿ, ಸುಸ್ತಿ ಬಡ್ಡಿಯಾದರೂ ಕಡಿಮೆ ಮಾಡುವುದಕ್ಕೆ ವಿಚಾರ ಮಾಡಿ.

ಶ್ರೀ ಎಸ್. ಬಂಗಾರಪ್ಪ : ಆ ವಿಚಾರ ಹೇಳುತ್ತೇನೆ. ಅದರ ಬಗ್ಗೆ ಹೇಳತಕ್ಕದ್ದು ಏನೂ ಇಲ್ಲ. ಇನ್ನು ಇಂಟರೆಸ್ಟ್ ಸಬ್ಸಿಡಿ ವಿಚಾರದಲ್ಲಿ ತಮ್ಮ ಕಾಲದಲ್ಲೂ ಕೂಡ ಅದನ್ನು ಮಾಡಿದ್ದಿರಿ. ಅದರ ಬಗ್ಗೆ ಆಲ್ಟರ್ನೇಟೀವಾಗಿಯಾದರೂ ಕೊನೇ ಪಕ್ಷ ಮಾಡಿದರೆ ಅನೇಕ ರೈತರಿಗೆ ಉಪಕಾರ ಆಗುತ್ತದೆ ಎಂಬ ಸಲಹೆ ಬಂತು. ಮಾನ್ಯ ವಿರೋಧಪಕ್ಷದ ನಾಯಕರು, ಉಪನಾಯಕರು ಅನೇಕ ಜನ ಮಾನ್ಯ ಸದಸ್ಯರು ಹೇಳಿದ್ದಾರೆ. ಬೈರೇಗೌಡರು ಈಗ ಹೇಳಿದ್ದಾರೆ. ಆ ಸದನದಲ್ಲಿ

ಕೂಡ ವಿರೋಧಪಕ್ಷದ ನಾಯಕರಾದ ನಾಣಯ್ಯನವರು ಕೂಡ ಹೇಳಿದ್ದಾರೆ. ಈ ವಿಚಾರವನ್ನು ಸರ್ಕಾರ ಗಮನದಲ್ಲಿ ಸೀರಿಯಸ್ಸಾಗಿ ಇಟ್ಟುಕೊಂಡಿದೆ ಇಂಟರೆಸ್ಟ್ ಸಬ್ಸಿಡಿ ವಿಚಾರ. ಕೊನೇ ಪಕ್ಷ ಅದು ಮಾಡಿದರೆ ಕೂಡ ಉಪಯೋಗ ಬೀಳಬಹುದು ರೈತರಿಗೆ ಎಂದು. ಅದನ್ನು ಗಮನದಲ್ಲಿಟ್ಟುಕೊಂಡಿದ್ದೇವೆ. ಅದರ ಬಗ್ಗೆ ಏನು ಮಾಡಬೇಕೆಂದು ಎಂಬ ಬಗ್ಗೆ ನಾವು ಸೂಕ್ತ ಕಾಲದಲ್ಲಿ ತೀರ್ಮಾನ ಮಾಡುತ್ತೇವೆ. ಇಷ್ಟು ಬಿಟ್ಟರೆ ಬೇರೆ ಏನೂ ಹೇಳುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು : ಶ್ರೀ ಏಕಾಂತಯ್ಯನವರೆ, ನಿಮ್ಮ ರೆಸಲ್ಯೂಷನ್ ಮೂವ್ ಮಾಡಿ..

ಶ್ರೀ ಬಿ.ಎಸ್. ಯಡಿಯೂರಪ್ಪ : ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಮಾಡಿದರೆ ನಮ್ಮ ಒಪ್ಪಿಗೆ ಇಲ್ಲ. ರೈತರ ಹತ್ತು ಸಾವಿರ ರೂಪಾಯಿ ಸಾಲ ಮನ್ನಾ ಮಾಡುತ್ತೇವೆ ಎಂದು ಲೋಕಸಭೆ ಚುನಾವಣೆ ಕಾಲದಲ್ಲಿ ನೀವು ಹೇಳಿದ್ದೀರಿ. ಅದನ್ನು ಇಂಪ್ಲಿಮೆಂಟ್ ಮಾಡಬೇಕು. ಈಗ ಈ ರೈತ ವಿರೋಧಿ ನೀತಿಯನ್ನು ಪ್ರತಿಭಟನೆ ಮಾಡಿ ನಾವು ವಾಕ್ ಔಟ್ ಮಾಡುತ್ತಿದ್ದೇವೆ. ಈಗ ಎಲ್ಲಾ ಕಡೆ ರೈತರ ಆಸ್ತಿ ಜಪ್ತಿ ನಡೆಯುತ್ತಿದೆ.

(ಶ್ರೀ ಯಡಿಯೂರಪ್ಪನವರು ತಮ್ಮ ಸ್ಥಾನ ಬಿಟ್ಟು ಮಾತನಾಡುತ್ತಾ ಸಭಾತ್ಯಾಗ ಮಾಡಿದರು. ಇತರ ಭಾರತೀಯ ಜನತಾ ಪಕ್ಷದ ನಾಯಕರೂ ಅವರನ್ನು ಹಿಂಬಾಲಿಸಿದರು)

ಶ್ರೀ ಎಚ್. ಏಕಾಂತಯ್ಯ : ಸನ್ಮಾನ್ಯ ಸಭಾಧ್ಯಕ್ಷರೆ...

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ, ನಾನು ಒಂದೇ ಒಂದು ವಿಚಾರ ಹೇಳುವುದು, ಭಾರತೀಯ ಜನತಾ ಪಕ್ಷದ ಮಿತ್ರರು ರೈತರ ಬಗ್ಗೆ ಕಳಕಳಿ ಇಟ್ಟುಕೊಳ್ಳುವ ಹಕ್ಕು ಅವರಿಗೆ ಇಲ್ಲ ಎಂದು ನಾನು ಹೇಳುತ್ತಿಲ್ಲ. ಎಲ್ಲರಿಗೂ ಹಕ್ಕಿದೆ ಈ ದೇಶದಲ್ಲಿ ಎಂಬ ವಿಚಾರವನ್ನು ಮೂಲತಃ ಗಮನದಲ್ಲಿಟ್ಟೇ ಒಂದು ಮಾತು ಹೇಳುತ್ತಿದ್ದೇನೆ. ಆದರೆ ಆ ಭಾರತೀಯ ಜನತಾ ಪಕ್ಷದ ಚರಿತ್ರೆ ಇದೆಯಲ್ಲ, ಅದನ್ನು ನೋಡಿದರೆ ಅದು ಸಂಪೂರ್ಣವಾಗಿ ರೈತರಿಗೆ ವಿರೋಧವಾಗಿರತಕ್ಕ ಅವರ ನೀತಿ ಮೊದಲಿನಿಂದರೂ ಬಂದಿದೆ. ನಾನು ಅದು ಹೇಳಬಾರದು ಎಂದರೂ ಕೂಡ ಒಂದೇ ಸಾರಿ ಇವರು ಬದಲಾವಣೆ ಮಾಡಿ ರೈತರಿಗೋಸ್ಕರವೇ ಈ ಪಕ್ಷ ಹುಟ್ಟಿದೆಯೋ ಏನೋ ಎಂಬ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಈ ದೇಶದಲ್ಲಿ ಉಳಿದಿರತಕ್ಕ ರಾಜಕೀಯ ಪಕ್ಷಗಳು ಕಾಂಗ್ರೆಸ್ ಇರಬಹುದು ಅಥವಾ ದಳ ಇರಬಹುದು. ಯಾರೂ ರೈತರ ಪರವಾಗಿ ಇಲ್ಲವೇನೋ ಎಂಬ ಭಾವನೆಯಲ್ಲಿ ಪದೇ ಪದೇ ವಿಚಾರ ಎತ್ತುವುದು ಸಭಾತ್ಯಾಗ ಮಾಡುವುದು. ಎಷ್ಟು ಸಾರಿ ಈ ವಿಚಾರ ಎತ್ತಿದರು, ಎಷ್ಟು ಸಾರಿ ಸಭಾತ್ಯಾಗ ಮಾಡಿದರು? ಆದರೆ ಒಂದು ನನಗೆ ಗೊತ್ತಿದೆ. ಕರ್ನಾಟಕ ರಾಜ್ಯದ ರೈತರ ಪರವಾಗಿ ನಮ್ಮ ಸರ್ಕಾರ ಸ್ಪಷ್ಟವಾಗಿದೆ. ಹಲವಾರು ಕಾರ್ಯಕ್ರಮಗಳನ್ನು ನಾವು ತೆಗೆದುಕೊಂಡಿದ್ದೇವೆ. ಇನ್ನೂ ಕೂಡ ತೆಗೆದುಕೊಳ್ಳುವುದಿದೆ. ರೈತರ ಪರವಾಗಿ ಇರತಕ್ಕ ನಮ್ಮ ನೀತಿಯಲ್ಲಿ ಬದಲಾವಣೆ ಮಾಡಿಲ್ಲ, ನಾವು ಮಾಡುವುದಿಲ್ಲ. ಈ ಮಾತನ್ನು ಸ್ಪಷ್ಟಪಡಿಸುತ್ತೇನೆ. ಇವತ್ತು ಭಾರತೀಯ ಜನತಾ ಪಕ್ಷದ ಮಿತ್ರರು ಮಾಡುವುದೇನಿದೆ, ಇದು ರಾಜಕೀಯ ಬಿಟ್ಟರೆ ಇನ್ನೇನೂ ಇಲ್ಲ. ಇವರ ಬಂಡವಾಳ ಬೇರೆ ಬೇರೆ ರಾಜ್ಯಗಳಲ್ಲಿ ಅಧಿಕಾರದಲ್ಲಿರುವ ಕಡೆ ಏನು ಎಂಬುದು

ಸ್ಪಷ್ಟವಾಗಿ ಗೊತ್ತಿದೆ. ಕರ್ನಾಟಕ ರಾಜ್ಯದ ರೈತರು ಇದನ್ನು ಅರ್ಥ ಮಾಡಿಕೊಂಡಿದ್ದಾರೆ ಎಂಬ ಭಾರವಸೆಯನ್ನು ಸ್ಪಷ್ಟವಾಗಿ ಸರ್ಕಾರದಲ್ಲಿ ನಾನು ಇಟ್ಟುಕೊಂಡಿದ್ದೇನೆ.

ಅಧ್ಯಕ್ಷರು : ಶ್ರೀ ಏಕಾಂತಯ್ಯ...

ಶ್ರೀ ವಾಟಾಳ್ ನಾಗರಾಜ್ : ಬಡ್ಡಿ ಬಗ್ಗೆ ಸ್ಪಷ್ಟವಾಗಿ ಹೇಳಬೇಕು.
(ಗೊಂದಲ)

MR. SPEAKER : Nothing shall go on record. Sri Ekanthaiah...

ನಿಯಮ 159ರ ಮೇರೆಗೆ ಪ್ರಸ್ತಾವ

ಶ್ರೀ ಎಚ್. ಏಕಾಂತಯ್ಯ : (ಚಿತ್ರದುರ್ಗ) ಸನ್ಮಾನ್ಯ ಸಭಾಧ್ಯಕ್ಷರೆ, ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 159ರ ಪ್ರಕಾರ ಈ ಕೆಳಗೆ ನಮೂದಿಸಿರುವ ಪ್ರಸ್ತಾವನೆಯನ್ನು ಪ್ರಸ್ತಾಪಿಸಲು ತಮ್ಮ ಅನುಮತಿಯನ್ನು ನೀಡಬೇಕೆಂದು ನಾನು ವಿನಂತಿಸುತ್ತೇನೆ. ನನ್ನ ಪ್ರಸ್ತಾವನೆ ಈ ರೀತಿ ಇದೆ :

" ದೆಹಲಿ ವಿಶೇಷ ಪೋಲೀಸ್ ಸಿಬ್ಬಂದಿ ಕಾಯಿದೆಯ 6ನೇ ವಿಧಿಯ ಅನ್ವಯ ದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಭ್ರಷ್ಟಾಚಾರ ನಿರೋಧ ಕಾಯಿಗೆ ವ್ಯಾಪ್ತಿಯಲ್ಲಿ ಬರುವ ಅಪರಾಧಗಳನ್ನು ತನಿಖೆ ಮಾಡಲು ಈ ಹಿಂದೆ ರಾಜ್ಯ ಸರ್ಕಾರವು ನೀಡಿದ್ದ ಸಮ್ಮತಿಯನ್ನು ತಾರೀಖು 27-7-1991 ರಂದು ಹಿಂತೆಗೆದುಕೊಂಡಿರುವುದನ್ನು ಈ ಸದನವು ಅಸಮ್ಮತಿಸುತ್ತದೆ. ಮತ್ತು ಸದರಿ ಅಪರಾಧಗಳಿಗೆ ಸಂಬಂಧಪಟ್ಟಂತೆ ತನಿಖೆ ಮಾಡಲು ಅವಶ್ಯವಾದ ಸಮ್ಮತಿ ನೀಡುವಂತೆ ರಾಜ್ಯ ಸರ್ಕಾರವನ್ನು ಈ ಸದನವು ಒತ್ತಾಯಿಸುತ್ತದೆ...

ಸನ್ಮಾನ್ಯ ಅಧ್ಯಕ್ಷರೆ, ನಾನು ಈ ಪ್ರಸ್ತಾವನೆಯನ್ನು ಮಂಡಿಸುವುದಕ್ಕೆ ತಾವು ಅನುಮತಿಯನ್ನು ಕೊಟ್ಟಿದ್ದಕೋಸ್ಕರ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಮೊಟ್ಟ ಮೊದಲನೆಯದಾಗಿ ತಾರೀಖು 27-7-91ರಂದು ರಾಜ್ಯ ಸರ್ಕಾರ ದೆಹಲಿ ಸ್ಪೆಷಲ್ ಪೋಲೀಸ್ ಎಸ್ಟಾಬ್ಲಿಷ್‌ಮೆಂಟ್ ಕಾನೂನಿನ ಪ್ರಕಾರ ಸಮ್ಮತಿಯನ್ನು ಹಿಂತೆಗೆದುಕೊಂಡಿರುವ ಸರ್ಕಾರಿ ಆದೇಶವನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಸನ್ಮಾನ್ಯ ಅಧ್ಯಕ್ಷರೆ....

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಸರ್ಕಾರ ಕೂಡ ಒಪ್ಪಿದೆ.

ಅಧ್ಯಕ್ಷರು : ಈಗ ಮುಂದಿನ ವಿಷಯಕ್ಕೆ ನಾನು ಹೋಗಿದ್ದೇನೆ. ಸಾಕಷ್ಟು ಕಾಲವನ್ನು ತಮಗೆ ಕೊಟ್ಟಿದ್ದೇನೆ. ದಯವಿಟ್ಟು ತಾವು ಸಹಕರಿಸಿ.

ಶ್ರೀ ವಾಟಾಳ್ ನಾಗರಾಜ್ : ಬಡ್ಡಿ ಸುಸ್ತಿ ಬಡ್ಡಿ ಬಗ್ಗೆ ಸರ್ಕಾರದ ನೀತಿಯನ್ನು ನಾನು ವಿರೋಧಿಸುತ್ತೇನೆ. ನಾನೂ ಸಹ ಸಭೆಯಿಂದ ಹೊರಗೆ ಹೋಗುತ್ತೇವೆ.

ಅಧ್ಯಕ್ಷರು : ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದಾರೆ.
(ಶ್ರೀ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

ಶ್ರೀ ಸಿ. ಬೈರೇಗೌಡ : ಅದರ ಬಗ್ಗೆ ಚರ್ಚೆಯಾಗಿದೆ ಅಧ್ಯಕ್ಷರೆ ಸರ್ಕಾರ ಅದಕ್ಕೆ ವಿರೋಧ ಏನು ಇಲ್ಲ, ಆದರೆ ಇವತ್ತಿನ ದಿವಸ ತಕ್ಷಣ ಜಾರಿಗೆ ತರುತ್ತೇವೆಂದು ಒಂದು ಮಾತನ್ನು ಹೇಳಬೇಕಾಗಿದೆ. ಸರ್ಕಾರ ಒಪ್ಪಿರತಕ್ಕ ಈ ನೀತಿಯನ್ನು ಜಾರಿಗೆ ತರುತ್ತೇವೆಂದು ಹೇಳಿದರೆ ಆಯಿತು. ನಾನು ವರ್ಕಬಲ್ ಪ್ರಪೋಸೀಷನ್ ಹೇಳುತ್ತಿದ್ದೇನೆ. ಗ್ಲಿಸರಿನ್ ಕಣ್ಣೀರನ್ನು ರೈತರ ವಿಚಾರದಲ್ಲಿ ಸುರಿಸುಲು